ಶ್ರೀ ಶಿವರಾಜ್ ಎಸ್. ತಂಗಡಗಿ:– ಹಿಂದೆ ತೆಗೆದುಕೊಂಡಿದ್ದು 2012–13 ರಲ್ಲಿ ಮುಗಿಯಿತು. ಈಗ ಮತ್ತೆ ನಾವು ತೆಗೆದುಕೊಳ್ಳುತ್ತಿದ್ದೇವೆ. ಹ್ಯಾಂಡ್‌ಓವರ್ ಆಗಿದೆ. ನಾಳೆ ಹೇಳುತ್ತೇನೆ.

ಅಧ್ಯಕ್ಷರು:– ಇದರ ಬಗ್ಗೆ ನಾಳೆ ಹೇಳುತ್ತಾರೆ ಬಿಡಿ.

ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್:– ಕಾರ್ಪೊರೇಷನ್ ಕೆರೆಗಳನ್ನು ಕೂಡ ಇದರಲ್ಲಿ ಸೇರಿಸಿಕೊಳ್ಳಬೇಕು. ಹುಬ್ಬಳ್ಳಿ – ಧಾರವಾಡ ಮಹಾನಗರಸಭೆ ಕೆರೆಗಳನ್ನು ಕೂಡ ಸೇರಿಸಿಕೊಳ್ಳಬೇಕು.

ಅಧ್ಯಕ್ಷರು:– ಇದನ್ನು ನಾಳೆಗೆ ತೆಗೆದುಕೊಳ್ಳೋಣ. ಈಗ ಅರಣ್ಯ ಇಲಾಖೆ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಮಾನ್ಯ ಅರಣ್ಯ ಸಚಿವರಿಂದ ಉತ್ತರ.

7. ವಿತ್ತೀಯ ಕಾರ್ಯಕಲಾಪಗಳು.

2014–15ನೇ ಸಾಲಿನ ಅರಣ್ಯ ಮತ್ತು ಪರಿಸರ ಜೀವಿಶಾಸ್ತ್ರ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೆ, ಇಲಾಖಾವಾರು ಚರ್ಚೆಯಿಂದ ಖಂಡಿತವಾಗಿ ನಮಗೆ ಬಹಳಷ್ಟು ಸಲಹೆಗಳನ್ನು ಪಡೆಯುವುದಕ್ಕೆ, ತಿಳುವಳಿಕೆ ಪಡೆಯುವುದಕ್ಕೆ ತುಂಬಾ ಅನುಕೂಲವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ನಮಗೆ ಇಲಾಖೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುವು ಮಾಡಿಕೊಟ್ಟು ನಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡುವುದಕ್ಕೆ ಇದು ಅನುಕೂಲವೆಂದು ನಾನು ಭಾವಿಸಿದ್ದೇನೆ. ನಾನು ಕೂಡ ಗ್ರಾಮೀಣ ಭಾಗದ ರೈತ ಕುಟುಂಬದಿಂದ ಬಂದಿರತಕ್ಕಂಥವನು. ಶಾಸಕನಾಗಿ ಬರುವುದಕ್ಕೆ ಪೂರ್ವದಲ್ಲಿ ಪಿ.ಎಲ್.ಡಿ. ಬ್ಯಾಂಕ್‌ನ ಅಧ್ಯಕ್ಷನಾಗಿ ಆರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಸಣ್ಣ ವಯಸ್ಸಿನಲ್ಲಿಯೇ ಸಾಮಾಜಿಕ ಬದುಕಿನಲ್ಲಿ ನನ್ನನ್ನ ನಾನು ತೊಡಗಿಸಿಕೊಂಡವನು. ಆದ್ದರಿಂದ ಯವುದೇ ಸಮಸ್ಯೆ ಇದ್ದರೂ

ಕೂಡ ನನಗೆ ಒಂದು ರೀತಿಯಲ್ಲಿ ಅದನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ನನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಕ್ಕೆ ನಾನು ಬದ್ಧನಿದ್ದೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅರಣ್ಯ ಇಲಾಖೆ ಎಂದ ಕೂಡಲೇ ಇದರಲ್ಲಿ ಅನೇಕ ಸಮಸ್ಯೆಗಳು ಖಂಡಿತ ಇದೆ. ಅದು deemed forest ಸಮಸ್ಯೆಯಿರಬಹುದು, ಅರಣ್ಯ ಹಕ್ಕುಗಳ ಕಾಯಿದೆಯ ಅನುಷ್ಠಾನದ ಬಗ್ಗೆ ಸಮಸ್ಯೆಯಿದೆ, ಕಳಸಾ ಇನಾಂ ಜಾಗದ ಬಗ್ಗೆ ನಮ್ಮ ಚಿಕ್ಕಮಂಗಳೂರಿನಲ್ಲಿ ಸಮಸ್ಯೆ ಇದೆ, ಅರಣ್ಯ ಒತ್ತುವರಿ ಸಮಸ್ಯೆ ಮತ್ತೊಂದು ರೀತಿಯ ಸಮಸ್ಯೆ. ಮಾನ್ಯ ಅಧ್ಯಕ್ಷರ ಜಿಲ್ಲೆಯಲ್ಲಿ ಶರಾವತಿ ಮುಳುಗಡೆಯಲ್ಲಿ ಜಾಗ ಕಳೆದುಕೊಂಡವರ ಸಮಸ್ಯೆ, ಹೀಗೆ ಅನೇಕ ಸಮಸ್ಯೆಗಳಿದೆ. ನನಗೆ ಸಿಕ್ಕಿರತಕ್ಕಂಥ ಅವಕಾಶದಲ್ಲಿ ಬಹುಶ: ಈ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಅಪ್ಪಚ್ಚು ಎಂ. ರಂಜನ್:- ಆನೆ ಕಾಟದ ಸಮಸ್ಯೆಯಿದೆ.

ಶ್ರೀ ಬಿ. ರಮಾನಾಥ ರೈ:- ಆನೆ ಕಾಟವಿದೆ, ವನ್ಯಜೀವಿ ಸಂರಕ್ಷಣೆಯ ಒಂದು ಕೆಲಸ ಕಾರ್ಯಗಳನ್ನು ಮಾಡುವಾಗ, ವನ್ಯ ಪ್ರಾಣಿಗಳ ಸಂಘರ್ಷ. ಈ ರೀತಿಯ ಸಮಸ್ಯೆಗಳಿವೆ. ತಮಗೆಲ್ಲರಿಗೂ ಗೊತ್ತಿದೆ, ಪರಿಸರ ಸಂರಕ್ಷಣೆಯ ಮೇಲೆ ನಮ್ಮ ಮಾನವ ಸಂಕುಲನದ ಅಳಿವು ಉಳಿವು ಕೂಡ ಅದರಲ್ಲಿದೆ ಎಂದು ಹೇಳತಕ್ಕಂಥದ್ದು ಸತ್ಯ. ಪ್ರಾಕೃತಿಕ ಸಮತೋಲನವನ್ನು ಉಳಿಸತಕ್ಕಂಥದ್ದು, ತಾಪಮಾನ ವೈಪರಿತ್ಯವನ್ನು ನಾವು ಸಮಾನ ರೀತಿಯಲ್ಲಿ ಉಳಿಸಿಕೊಂಡು ಬರತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ಪ್ರಾಕೃತಿಕ ಸಮತೋಲನವನ್ನು ಕಾಯ್ದುಕೊಂಡು ಹೋಗತಕ್ಕಂಥ ಕೆಲಸವೂ ಕೂಡ ಆಗಬೇಕಾಗಿದೆ. ಅದರ ಜೊತೆಯಲ್ಲಿ ಜನರ ಸಮಸ್ಯೆಗಳ ಬಗ್ಗೆ ಕೂಡ ಗಮನವನ್ನು ಹರಿಸಬೇಕಾಗಿದೆ ಎನ್ನುವಂಥದ್ದು ಕೂಡ ಮುಖ್ಯವಾಗಿರತಕ್ಕಂಥದ್ದಾಗಿದೆ. ನಾನು ಈಗ ಇತರ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ನಮಗೆ ಕೊಟ್ಟಿದ್ದಾರೆ, ಅದರಲ್ಲಿ ಕೆಲವು ಸಮಸ್ಯೆಗಳ ಬಗ್ಗೆ ಕೂಡ ನಮ್ಮ ಗಮನವನ್ನು ಸೆಳೆದಿದ್ದಾರೆ. ಅದಕ್ಕೆ

ಉತ್ತರವನ್ನು ಕೊಡತಕ್ಕಂಥ ಕೆಲಸವನ್ನಷ್ಟೇ ಈಗ ಮಾಡುತ್ತೇನೆ. ಏಕೆಂದರೆ ಈಗ ಹೆಚ್ಚು ಸಮಯವು ಕೂಡ ಇಲ್ಲ. ಹಿರಿಯರಾದಂಥ ಮತ್ತು ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥ ಬೋಪಯ್ಯ ಸಹೇಬರು ಈ ಅರಣ್ಯ ಇಲಾಕೆಯ ಬಗ್ಗೆ ಮಾತನ್ನು ಪ್ರಾರಂಭ ಮಾಡಿ ಅನೇಕ ವಿಚಾರಗಳ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಮುಖ್ಯವಾಗಿ ಇಲಾಖೆಯಲ್ಲಿರತಕ್ಕಂಥ IFS ವೃಂದ ಬಲದ ವೈರುಧ್ಯಗಳ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಇವತ್ತು IFS ಅಧಿಕಾರಿಗಳ ಕೆಲಸ ಕಾರ್ಯಗಳ ಬಗ್ಗೆ ಕೂಡ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರವು ಐದು ವರ್ಷಗಳಿಗೊಮ್ಮೆ IFS ವೃಂದಬಲವನ್ನು ಪರಿಷ್ಕರಿಸುತ್ತಿದ್ದು 2012 ನೇ ಸಾಲಿನಲ್ಲಿ ಈ ಪರಿಷ್ಕರಣೆಯಿಂದ ಒಟ್ಟು ವೃಂದಬಲ 164 ಎಂದು ನಿಗದಿಪಡಿಸಲಾಗಿದೆ. ಈ ಒಂದು ಅಧಿಕಾರಿಗಳು ಅವರ ಇಲಾಖೆಯ ಕಾರ್ಯಚಟುವಟಿಕೆಗಳಿಗೆ ಅನುಗುಣವಾಗಿ ವಿವಿಧ ದರ್ಜೆಯ ಅಧಿಕಾರಿಗಳ ವೃಂದಬಲ ನಿಗದಿಪಡಿಸಿದ್ದು 13 ಜನ ವೃತ್ತ ಮಟ್ಟದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆಗಳನ್ನು ಸೃಷ್ಟಿಸಲಾಗಿದೆ. ತಮಗೆ ಗೊತ್ತಿದೆ, ಐದು ವರ್ಷಗಳಿಗೊಮ್ಮೆ IFS ವೃಂದಬಲದ ಪರಿಷ್ಕರಣೆ ಮಾಡುವ ಕಾರ್ಯದಿಂದಾಗಿ ಇದು ಆಗುತ್ತಿದೆ. ಭಾರತ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯದ ನಿರ್ದೇಶನದ ಪ್ರಕಾರ ಈ ಒಂದು ಕೆಲಸ ಕಾರ್ಯಗಳನ್ನು ಮಾಡತಕ್ಕಂಥದ್ದು ಆಗುತ್ತದೆ. ಕೆಲವು ಹುದ್ದೆಗಳನ್ನು ಮೇಲ್ದರ್ಜೆಗೇರಿಸತಕ್ಕಂಥ ಸಂದರ್ಭಗಳು ಕೂಡ ಈ ಒಂದು ಸೂಚನೆಯ ಪ್ರಕಾರ ಆಗುತ್ತದೆ. ಇದರಿಂದ ಇಲಾಖೆಯ ಕಾರ್ಯಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಾವು ನಡೆಸಿಕೊಂಡು ಹೋಗುವುದಕ್ಕೆ, ಬೇರೆ ಬೇರೆ ವ್ಯವಸ್ಥೆಗಳ ಮಧ್ಯೆ, working plan ಇರಬಹುದು, squad ಇರಬಹುದು, ಸಂಶೋಧನಾ ಸಾಮಾಜಿಕ ಅರಣ್ಯ ಘಟಕಗಳ, ಈ ಅಧಿಕಾರಿಗಳ ಹುದ್ದೆಗಳ ಸೃಷ್ಟಿಯಾಗಿರಬಹುದು, ಇಂಥ ಅನೇಕ ಅಧಿಕಾರಿಗಳ ಮಟ್ಟದ ಹುದ್ದೆಗೆ ತಕ್ಕಂತೆ ಕೆಲಸ ಕಾರ್ಯಗಳಿಗೆ ಅವರಿಗೆ ಜವಾಬ್ದಾರಿಕೆಯನ್ನು ಹಂಚಿಕೆ ಮಾಡತಕ್ಕಂಥ ಕೆಲಸವನ್ನು ಇಲಾಖೆ ಮಾಡುತ್ತದೆ. ಈ ಎಲ್ಲಾ ವಿಷಯಗಳ ಬಗ್ಗೆ, ಸದನದಲ್ಲಿ ಪ್ರಸ್ತಾಪಿಸಿದ್ದು ಅಧಿಕಾರಿಗಳ ಸಮಾನವಾದ ಕೆಲಸ ಕಾರ್ಯಗಳ ಹಂಚಿಕೆ ಮಾಡುವ ಬಗ್ಗೆ

ಸೂಕ್ತ ಕ್ರಮ ಕೈಗೊಳ್ಳುವಂತೆ ನಮ್ಮ ಗೌರವಾನ್ವಿತ ಸದಸ್ಯರಾದಂಥ ಬೋಪಯ್ಯನವರು ನಮಗೆ ಸಲಹೆಯನ್ನು ನೀಡಿದ್ದಾರೆ. ವಿಭಾಗೀಯ ಮಟ್ಟದಲ್ಲಿ ಈ DCF ಹುದ್ದೆಗಳು, ಇದು IFS Cadre ಹುದ್ದೆಗಳಾಗಿದ್ದು, ಸಾಮಾನ್ಯವಾಗಿ IFS ಶ್ರೇಣಿಯ ಅಧಿಕಾರಿಗಳು ಮೀಸಲಾಗಿರತಕ್ಕಂಥ ಹುದ್ದೆಯಾಗಿರುತ್ತದೆ. ಆದರೂ ಕೂಡ ಇದೇ ಪದ್ಧತಿಯು ಭಾರತ ಸೇವೆಗಳಾದ IFS, IPS ಇಂತಹ ಕೆಲ ಅಧಿಕಾರಿಗಳ ಕೊರತೆಯಿಂದ ರಾಜ್ಯ ಅರಣ್ಯ ಸೇವೆಗಳಿಗೆ, ನಾವು ಸೀನಿಯರ್ ಸ್ಕೇಲ್ ಆಗಿರುವಂತಹ ಅರಣ್ಯಾಧಿಕಾರಿಗಳು ಹಾಗೂ ಅರಣ್ಯ ಸಂರಕ್ಷಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವಂತಹ IFS ಸೇವೆಗೆ ಅರ್ಹತೆ ಪಡೆದಿರುವವರಿಗೆ 26 ಕಡೆ ಅವಕಾಶ ಕಲ್ಪಿಸಿದ್ದೇವೆ. ಇನ್ನು ಪ್ರಮೋಷನ್ ಆಗಿ ಬಂದವರಿಗೆ ಅವಕಾಶ ಕೊಡುತ್ತಿಲ್ಲವೆನ್ನುವ ವಿಚಾರದಲ್ಲಿ ಮಾತನಾಡುತ್ತಿದ್ದಿರಿ.

ಶ್ರೀ ಕೆ.ಜಿ. ಬೋಪಯ್ಯ:– 164 ಜನ ನಿಮ್ಮ ಅರಣ್ಯ ಇಲಾಖೆಯಲ್ಲಿ ಇದ್ದಾರ ಅಥವಾ ಬೇರೆ ಬೇರೆ ಎಲ್ಲಾದರೂ ಇದ್ದಾರ? 164 ಜನರಿಗೆ ಅಲ್ಲಿ ಏನು ಕೆಲಸ? ಅದನ್ನು ನೀವು explain ಮಾಡಬೇಕೆಂದು ಕೇಳಿದ್ದೆನು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಒಂದು ಪತ್ರಿಕೆಯಲ್ಲಿ ಗಲಾಟೆ ಎಂದು ಬಂದಿದೆ.

ಶ್ರೀ ಬಿ. ರಮಾನಾಥ ರೈ:– ಅಂಥಾದ್ದೇನಿಲ್ಲ, ಈಗ IFS ಅಧಿಕಾರಿಗಳನ್ನು ಕೂಡ ಕೆಲವು ಅನ್ಯ ಕಾರ್ಯಗಳಿಗೆ ನೇಮಕ ಮಾಡುವುದು ಇದೆ. ಆದರೂ ಕೂಡ ಇದೆಲ್ಲ ವ್ಯವಸ್ಥೆಗಳು ಏಕೆ ಬಂತೆಂದರೆ ಈ ಒಂದು ಕೆಲಸಗಳನ್ನು ಸೂಕ್ತವಾದಂತಹ ರೀತಿಯಲ್ಲಿ ಮಾಡುವುದಕ್ಕೆ ಇಂತಹ ಒಂದು ಹುದ್ದೆಗಳನ್ನು ಸೃಷ್ಟಿ ಮಾಡಿರುವುದಾಗಿದೆ. Administrative Tribunal ಉಚ್ಚನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ರಾಜ್ಯ ಅರಣ್ಯ ಸೇವೆಗೆ ಸೇರಿದ ಅಧಿಕಾರಿಗಳ ಅನುಭವವನ್ನು ಕೂಡ ಇಲಾಖೆ ಪ್ರಮುಖ ಕೆಲಸಗಳಿಗೆ ಬಳಸಿಕೊಳ್ಳುವಂತೆ ನಮಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಅದಕ್ಕಾಗಿ ಅವರನ್ನು ಇಂತಹ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲು ನಾವು ಅವರಿಗೂ ಕೂಡ

ಅವಕಾಶ ಮಾಡಿಕೊಡುತ್ತೇವೆಂದು ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ಸದನಕ್ಕೆ ತಿಳಿಸಲು ಇಷ್ಟಪಡುತ್ತಿದ್ದೇನೆ. ಇದೊಂದು ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಕೆಲಸ ಮಾಡಬೇಕಾದರೆ ಇಂತಹ ಕಾರ್ಯಗಳನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ, ಆ ಕೆಲಸವನ್ನು ಅರಣ್ಯ ಇಲಾಖೆ ಮಾಡುತ್ತಿದೆ. ಆದರೆ ತಾವೆಲ್ಲ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು ಮಾತ್ರ ಇದ್ದಾರೆ, ಕೆಳಸ್ತರದಲ್ಲಿ ಅಧಿಕಾರಿಗಳ ಕೊರತೆ ಇದೆ ಎನ್ನುವ ಮಾತನ್ನು ಹೇಳಿದ್ದೀರಿ. ಇವತ್ತು ಅರಣ್ಯ ಇಲಾಖೆಯಲ್ಲಿ 11,521 ಸಿಬ್ಬಂದಿಗಳೋ ಸಂಖ್ಯಾಬಲ ಇದೆ. ಅದರಲ್ಲಿ ಅರಣ್ಯ ರಕ್ಷಕರು 3,994 ಹುದ್ದೆಗಳು ಇವೆ. ಒಬ್ಬ beat guard ಸುಪರ್ದಿಗೆ 1,500 ಹೆಕ್ಟೇರ್‌ಗಿಂತ ಹೆಚ್ಚಿನ ಅರಣ್ಯ ಭೂಮಿಯಿದ್ದು, ಈ ವರ್ಗದಲ್ಲಿ ಹೆಚ್ಚು ಹುದ್ದೆಗಳು ಖಾಲಿಯಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ನಾವು ಈಗಾಗಲೇ ಹೊಸ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ವಲಯ ಅರಣ್ಯಾಧಿಕಾರಿಗಳು, ಉಪ ವಲಯ ಅರಣ್ಯಾಧಿಕಾರಿಗಳು, ಅರಣ್ಯ ರಕ್ಷಕರ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆ ನಮಗೆ ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದೆ. ತಮಗೆ ಗೊತ್ತಿರುವ ಹಾಗೆ ಒಂದು ಹಿನ್ನೆಲೆಯ ಕಾರಣದಿಂದ ಹುದ್ದೆಗಳನ್ನು ತುಂಬುವುದಕ್ಕೆ ತಡವಾಗಿದೆ. ನಾವು ಈಗ ನೇಮಕಾತಿ ಪ್ರಕ್ರಿಯೆಯನ್ನು ಅರ್ಧದಲ್ಲಿ ಏನು ನಿಲ್ಲಿಸಿದ್ದೇವೆ, ಅದನ್ನು ಮುಂದುವರೆಸಿಕೊಂಡು ಮುಗಿಸುತ್ತೇವೆ. ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ 700ಕ್ಕೂ ಹೆಚ್ಚು ಅರಣ್ಯ ಸಂರಕ್ಷಣೆ ಮತ್ತು ವನ್ಯ ಪ್ರಾಣಿಗಳ ಭೇಟೆ ತಡೆ ಕ್ಯಾಂಪುಗಳನ್ನು ನಡೆಸಲಾಗುತ್ತಿದ್ದು, ಪ್ರತಿ ಕ್ಯಾಂಪಿನಲ್ಲಿ 4–5 ಜನ ಸಿಬ್ಬಂದಿಗಳು ರಾತ್ರಿ–ಹಗಲು ಗಸ್ತು ತಿರುಗುವ ಕೆಲಸವನ್ನು ಮಾಡುತ್ತಿದ್ದಾರೆ. ಈಗಾಗಲೇ ವಲಯ ಅರಣ್ಯಾಧಿಕಾರಿಗಳ ಮಟ್ಟದ ಸಿಬ್ಬಂದಿಗಳಿಗೆ ವಾಹನ ಒದಗಿಸಲಾಗುತ್ತಿದ್ದು, ಎಲ್ಲಾ ಸೂಕ್ಷ್ಮ ವಲಯಗಳಿಗೆ ವಾಹನ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗ ಹೊಸದಾಗಿ 96 ವಾಹನಗಳನ್ನು ನಾವು ಅನುಮತಿ ಪಡೆದುಕೊಂಡು ಇವತ್ತು ಹಂಚಿಕೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಅರಣ್ಯ ರಕ್ಷಕರಿಗೆ ನಾವು 2014ರಲ್ಲಿ 175 ಸ್ವಯಂಚಾಲಿತ ಗನ್ನುಗಳನ್ನು

ಕೊಡುತ್ತಿದ್ದು, ಅದು ಪತ್ರಿಕೆಯಲ್ಲಿ ಬಂದಿರುವುದು ತಮಗೆ ಗೊತ್ತಿದೆ. ಅದನ್ನು ಅಮೇರಿಕಾದಿಂದ ಆಮದು ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, Director General of Foreign Trade ಇವರ ಅನುಮತಿಗೆ ಕಾಯುತ್ತಿದ್ದೇವೆ. ಅದಕ್ಕೆ ಅನುಮತಿ ಸಿಕ್ಕಿದ ತಕ್ಷಣ . . .

ಶ್ರೀ ಸಿ.ಟಿ. ರವಿ:– ಅನುಮತಿ ಸಿಕ್ಕಿದ ತಕ್ಷಣ ಕಂಡಲ್ಲಿ ಗುಂಡು?

ಶ್ರೀ ಬಿ. ರಮಾನಾಥ್ ರೈ:– ಕಂಡಲ್ಲಿ ಗುಂಡು ಅಲ್ಲ, ನಮ್ಮ ಅರಣ್ಯ ರಕ್ಷಣೆ ಕೆಲಸದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಇದನ್ನು ಉಪಯೋಗ ಮಾಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:– ನೀವು ಕೊಟ್ಟಿರುವಂತಹ ಗನ್ನುಗಳನ್ನು ಎತ್ತಿಕೊಂಡು ಓಡುವುದಕ್ಕೆ ಆಗುವುದಿಲ್ಲ, ಅಂತಹ ಗನ್ನುಗಳನ್ನು ಕೊಟ್ಟಿದ್ದೀರಿ. ಅದು ವೇಸ್ಟ್ ಅಷ್ಟೆ. ಸ್ವಲ್ಪ ಲೈಟ್ ಆಗಿ ಇರುವುದನ್ನು ಕೊಡಬೇಕು.

ಶ್ರೀ ಬಿ. ರಮಾನಾಥ್ ರೈ:– ಈಗ ಅಮೇರಿಕಾದಿಂದ ತಂದಿರುವ ಗನ್ನುಗಳು ಭಾರ ಇದೆ ಎನ್ನುವ ಲೆಕ್ಕವೇ?

ಶ್ರೀ ಕೆ.ಜಿ. ಬೋಪಯ್ಯ:– ನನಗೆ ಗೊತ್ತಿಲ್ಲ, ಈಗ ಅವರ ಕೈಯಲ್ಲಿರುವ ಗನ್ನಿನ ಭಾರ ನೋಡಿದರೆ, ಅವರೇನು ಹೊತ್ತುಕೊಂಡು ಓಡುವುದಕ್ಕೆ ಆಗುವುದಿಲ್ಲ, ಅವರು ಕೊಟ್ಟಿರುವ ಗನ್ನುಗಳು ಅಷ್ಟು ತೂಕ ಇದೆ. ಈ ರೀತಿ ಹಿಡಿದು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರು ಪ್ರಾಣಿಗಳನ್ನು ತಿಂದು ಶಕ್ತಿ ಬೆಳೆಸಿ ಆಮೇಲೆ ಗುಂಡು ಹೊಡೆಯಬೇಕು, ಅಷ್ಟೆ.

ಅಧ್ಯಕ್ಷರು:– ಈಗ ಫಾರೆಸ್ಟ್ ಉಳಿದಿರುವುದು ಇವರ ಗನ್ನುಗಳಿಂದ ಅಲ್ಲ. ಇವತ್ತು ಒಂದು ಪತ್ರಿಕೆಯಲ್ಲಿ ಕೊಪ್ಪಳ ಕಡೆ ಜಿಂಕೆಗಳು ಜಾಸ್ತಿಯಾಗಿವೆ ಎಂದು ನೋಡಿದೆ.

ಶ್ರೀ ಬಿ. ರಮಾನಾಥ್ ರೈ:– ಈಗ ಏನಾಗಿದೆ ಎಂದರೆ ವನ್ಯ ಜೀವಿಗಳ ಸಂರಕ್ಷಣೆ ಕಾಯಿದೆ ಬಂದನಂತರ ಪ್ರಾಣಿಗಳನ್ನು ಸಾಯಿಸುವುದನ್ನು ಕಾನೂನು

ಬದ್ಧವಾಗಿ ನಿಲ್ಲಿಸುವಂತಹ ಕೆಲಸವಾಗಿದೆ. ಜನರ ಮನಸ್ಸಿನಲ್ಲಿ ಕೂಡ ಪ್ರಾಣಿಗಳನ್ನು ಸಾಯಿಸಬಾರದು ಎನ್ನುವ ಭಾವನೆ ಉಂಟಾಗಿದ್ದು, ವನ್ಯ ಜೀವಿಗಳ ಸಂರಕ್ಷಣೆ ಮಾಡಬೇಕೆಂದು ಬಂದಿದೆ. ಇವತ್ತು ನಮ್ಮ ಪ್ರಾಣ ಮತ್ತು ಮಾನ ರಕ್ಷಣೆಯನ್ನು ನಾವು ಮಾಡುತ್ತೇವೆ. ಆದರೆ ಆ ಪ್ರಾಣಿಗಳ ಪ್ರಾಣ ರಕ್ಷಣೆ ಮಾಡುವುದೂ ಕೂಡ ನಮ್ಮ ಕರ್ತವ್ಯ ಇದೆ. ವನ್ಯ ಜೀವಿಗಳನ್ನು ಸಂರಕ್ಷಣೆ ಮಾಡಬೇಕೆನ್ನುವುದು ಕೇವಲ ಸರ್ಕಾರದ ಉದ್ದೇಶವಲ್ಲ, ಜನರ ಮನಸ್ಸಿನಲ್ಲಿ ಅರಣ್ಯ ಪ್ರಾಣಿಗಳನ್ನು ಉಳಿಸಬೇಕೆನ್ನುವ ಮನೋಭಾವನೆ ಬಂದಿದೆ. ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಆನೆಗಳು ಮತ್ತು ಹುಲಿಗಳು ಇರುವಂತಹ ರಾಜ್ಯ ಎಂದರೆ ನಮ್ಮ ಕರ್ನಾಟಕ ರಾಜ್ಯ ನಮ್ಮ ರಾಜ್ಯದಲ್ಲಿ 300 ಹುಲಿಗಳು ಮತ್ತು 6,000 ಆನೆಗಳು ಇವೆ. ಈಗ ಅರಣ್ಯ ಪ್ರದೇಶದ ವ್ಯಾಪ್ತಿ ಕೂಡ ಕಡಮೆಯಾಗಿದೆ. ಹಿಂದೆ 50% ಕಾಡಿಗೆ ಸಂಬಂಧಪಟ್ಟ ಅರಣ್ಯ ಪ್ರದೇಶವಿತ್ತು. ಆದರೆ ಇವತ್ತು ಸುಮಾರು 22% ಅಂದರೆ, 21.0 something ಅಷ್ಟು ಅರಣ್ಯ ಪ್ರದೇಶ ಇದೆ. ಆ ಪ್ರದೇಶದಲ್ಲಿ ಕೂಡ ಪ್ರಾಣಿಗಳ ಸಂಖ್ಯೆ ಜಾಸ್ತಿಯಾಗಿದೆ. ತಾವು ಕಾಡಿನಲ್ಲಿ ತೇಗದ ಮರಗಳು ಇವೆ, ಅಲ್ಲಿ ಯಾವುದೇ ಗಿಡಗಳೂ ಬದುಕುವುದಿಲ್ಲ, ಅವುಗಳು ಹಣ್ಣುಗಳನ್ನು ಕೊಡದಂತಹ ಮರಗಳಿವೆ ಎಂದು ಹೇಳುತ್ತೀರಿ. ಆದರೆ ಹಿಂದಿನ ಕಾಲದಲ್ಲಿ ಅದರ ಪರಿಕಲ್ಪನೆ ಬೇರೆ ಇತ್ತು. ಆಗ ಕಾಡು ಎಂದರೆ ಬೆಲೆ ಬಾಳುವ ಮರಗಳನ್ನು ನಾವು ನೆಟ್ಟು ಬೆಳೆಸುವಂಥಾದ್ದು. ಏಕೆಂದರೆ ಆಗಿನ ಉದ್ದೇಶ ಬೇರೆ ಇತ್ತು. ಒಂದು ಉದ್ದಿಮೆಗಾಗಿ ಆ ಕಾಡನ್ನು ಬೆಳೆಸತಕ್ಕಂಥಾದಿದ್ದು, ಅದು ಮರಮುಟ್ಟಿಗಾಗಿ, ಮೋಪಿಗಾಗಿ, ಜನರ ಸವಲತ್ತಿಗಾಗಿ ಅಥವಾ ಉರುವಲು ಕಾರಣಕ್ಕಾಗಿ ಕಾಡು ಎಂದು ಇತ್ತು. ಆದರೆ ಈಗ ಪರಿಸರದ ತಾಪಮಾನ ವೈಪರೀತ್ಯವಾಗುವಂತಹ ಸಂದರ್ಭದಲ್ಲಿ, ಇವತ್ತು ಪರಿಸರದ ಜಾಗೃತಿಯನ್ನು ಸಂರಕ್ಷಣೆಗಾಗಿ ಕಾಡನ್ನು ಉಳಿಸುವಂಥಾದ್ದಾಗಿದೆ. ಕಾಡು ಎನ್ನುವುದು ಸಂರಕ್ಷಣೆ ದೃಷ್ಟಿಯಲ್ಲಿ ನಾವು ನೋಡಿಕೊಂಡು ಬರುತ್ತಿದ್ದು, ಕಾಡು ಎಂದರೆ ಹಿಂದಿನ ಮತ್ತು ಈಗಿನ ಪರಿಕಲ್ಪನೆಗಳು ಬೇರೆ ಬೇರೆ ಇದೆ. ಹಳೇ ಕಾಲದಲ್ಲಿ ಇಂತಹ ಮರಗಳನ್ನು ಬೆಳೆಸತಕ್ಕಂಥಾದಿದ್ದು, ಬೆಳೆಸಿದ್ದಾರೆ. ಆದರೆ ಈಗ ಪ್ರಾಣಿಗಳಿಗೆ ಬೇಕಾದಂತಹ

ಹಣ್ಣುಗಳನ್ನು ಕೊಡುವಂತಹ ಮರ ನೆಡಬೇಕೆನ್ನುವುದನ್ನು ಕೂಡ ತಾವು ಸಲಹೆ ಕೊಟ್ಟಿದ್ದೀರಿ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಹೊಸ plantation ಮಾಡುವುದೇನಿದೆ, ಸೀಮಿತ ಅರಣ್ಯ ಪ್ರದೇಶಗಳಲ್ಲಿ ಹಣ್ಣು ಕೊಡುವಂತಹ ಮರಗಳನ್ನು ನೆಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡಿ ಮಾರಾಯರೆ, ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಯುವುದನ್ನು ತಪ್ಪಿಸಿಬಿಡಿ.

ಶ್ರೀ ಬಿ. ರಮಾನಾಥ್ ರೈ:– ಈಗ ಅದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ.

ಅಧ್ಯಕ್ಷರು:– ಆಗ ಒಂದಿಷ್ಟು ಹಕ್ಕಿಪಕ್ಷಿಗಳು ಬರುತ್ತವೆ.

ಶ್ರೀ ಬಿ. ರಮಾನಾಥ್ ರೈ:– ಆಗ ಉರುವಲಿಗಾಗಿ ಅಕೇಶಿಯಾ ಅಥವಾ ಇನ್ನಿತರ ಮರಗಳಿರಬಹುದು .. . .

ಶ್ರೀ ಸಿ.ಟಿ. ರವಿ:– ನೀಲಗಿರಿ ಉರುವಲಿಗೂ ಬರುವುದಿಲ್ಲ. ಅದು ಎಂಥಾದ್ದಕ್ಕೂ ಬರುವುದಿಲ್ಲ, ಹೊಗೆ ಬರುತ್ತದೆ.

ಶ್ರೀ ಎಸ್. ಅಂಗಾರ:– ಮಾನ್ಯ ಅಧ್ಯಕ್ಷರೆ, ಅದರ ಅಡಿಯಲ್ಲಿ ಹುಲ್ಲು ಸಹ ಬೆಳೆಯುವುದಿಲ್ಲ.

ಅಧ್ಯಕ್ಷರು:– ಹುಲ್ಲು ಕೂಡ ಬೆಳೆಯುವುದಿಲ್ಲ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿರುವುದು ಸತ್ಯ. ಆ ಕಾಲದಲ್ಲಿ ಆ ರೀತಿ ಇತ್ತು. ಈಗ ನಾವು ಅದಕ್ಕೆ ಪ್ರೋತ್ಸಾಹ ಕೊಡುವುದಿಲ್ಲ. ನಾವು ಹಣ್ಣಿನ ಗಿಡಗಳನ್ನು ಮತ್ತು ಪ್ರಾಣಿಗಳಿಗೆ ಬೇಕಾದ ಗಿಡಗಳನ್ನು ನೆಡಬೇಕೆಂಬ ಉದ್ದೇಶದಿಂದ ಆ ಕೆಲಸವನ್ನು ಮಾಡುತ್ತಿದ್ದೇವೆ. ತಾವು ದಿನಗೂಲಿ ನೌಕರರಿಗೆ ಸಂಬಳ ಸರಿಯಾಗಿ ಕೊಡುತ್ತಿಲ್ಲವೆಂದು ಹೇಳಿದ್ದೀರಿ. ಈ 2–3 ತಿಂಗಳುಗಳಲ್ಲಿ ಸಂಬಳ ವಿತರಣೆ ಮಾಡದಿರುವ ವಿಚಾರವನ್ನು ತಾವು ನಮ್ಮ ಗಮನಕ್ಕೆ ತಂದಿದ್ದೀರಿ. ನಾವು ಈಗಾಗಲೇ Tiger foundationನಿಂದ ತಾತ್ಕಾಲಿಕ ವೇತನ ನೀಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಇವತ್ತು ಅದರ ಮೂಲಕ ಕೆಲಸಕಾರ್ಯಗಳನ್ನು ನಿಷ್ಠೆಯಿಂದ ಮಾಡತಕ್ಕಂಥ ಇವರಿಗೆ Tiger Foundation ನಿಂದ ತಾತ್ಕಾಲಿಕ ವೇತನವನ್ನು ನೀಡಲಾಗುತ್ತಿದ್ದು, ಅವರಿಗೆ ಇವತ್ತು ಸರಿಯಾದ ಸಮಯಕ್ಕೆ ವೇತನವನ್ನು ಕೊಡಬೇಕೆಂದು ಇದ್ದರೂ ಕೂಡ, ಕೆಲವು ಸಾರಿ ನಿಧಾನವಾಗುತ್ತದೆ. ನಾವು ಅದನ್ನು ನಿಯಂತ್ರಣ ಮಾಡುವ ಪ್ರಯತ್ನವನ್ನು ಮಾಡುತ್ತೇನೆ. ಅದೇ ರೀತಿಯಲ್ಲಿ ಶ್ರೀಗಂಧದ ಮರಗಳನ್ನು ರಕ್ಷಣೆ ಮಾಡಬೇಕೆನ್ನುವಂಥದ್ದು ಇದೆ, ಅದು ಅನೇಕ ಕಡೆಗಳಲ್ಲಿ ಕಳ್ಳ ಸಾಗಾಣಿಕೆ ಆಗುತ್ತಿದೆ.

ಅಧ್ಯಕ್ಷರು:– ಅದು ಮುಗಿದು ಹೋಗಿದೆ, close ಆಗಿ ಹೋಗಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಈಗ ಗಂಧದ ಮರವನ್ನು ಹುಡುಕಿದರೂ ಸಿಗುವುದಿಲ್ಲ.

ಅಧ್ಯಕ್ಷರು:– ಹೌದು.

ಶ್ರೀ ಬಿ. ರಮಾನಾಥ ರೈ:– ಅದಕ್ಕೆ ಕಾರಣವೇನೆಂದರೆ, ಒಂದು ಟನ್ ಗಂಧದ ಮರಕ್ಕೆ 60 ಲಕ್ಷ ರೂ.ಗಳು ಇದೆ.

ಅಧ್ಯಕ್ಷರು:– ನಿಜ.

ಶ್ರೀ ಬಿ. ರಮಾನಾಥ ರೈ:– ಅದನ್ನು ರಕ್ಷಣೆ ಮಾಡುವಂಥದ್ದರ ಬಗ್ಗೆ ಕೂಡ ಪ್ರಾಮಾಣಿಕ ಪ್ರಯತ್ನವಾಗಬೇಕಾಗಿದೆ, ಅದನ್ನು ನಾನು ಒಪ್ಪುತ್ತೇನೆ. ಇವತ್ತು ಗಂಧದ ಮರ ಒಂದು ಟನ್‌ಗೆ 60 ಲಕ್ಷ ರೂ.ಗಳಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಮಂತ್ರಿಗಳೆ, ಗಂಧದ ಮರವನ್ನು ರಕ್ಷಣೆ ಮಾಡುವುದಕ್ಕೆ ಕಾಯಿದೆಯಲ್ಲಿ ಏನಾದರೂ ತಿದ್ದುಪಡಿಯನ್ನು ತರುತ್ತೀರಾ?

ಅಧ್ಯಕ್ಷರು:– ಇರುವುದೇ ಸಾಕು, ಅದು ಏನು ಆಗಿಲ್ಲ. ಊರುಗಳಲ್ಲಿ ಹುಡುಗರು ಇದ್ದಾರಲ್ಲ, ಅವರು ಮರವನ್ನು ಕಡಿಯುವುದು, ಮಾರಾಟ ಮಾಡುವುದು.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ಶ್ರೀಗಂಧದ ಮರವನ್ನು ಕಳ್ಳ ಸಾಗಾಣಿಕೆ ಮಾಡುವಂಥದ್ದನ್ನು ತಡೆಯಲು ರಕ್ಷಣೆ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಪ್ರಯತ್ನ ಮಾಡಿ, ನಾವು ಅನೇಕ ಕಡೆಗಳಲ್ಲಿ natural ಆಗಿ ಬೆಳೆದಿರುವಂಥ ಗಂಧದ ಕಾಡನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ತಮ್ಮ ಡಿಪಾರ್ಟ್‌ಮೆಂಟ್‌ನಿಂದ ನೆಡುವ ಗಂಧದ ಮರವನ್ನು ಪ್ರಭಾವಿ ವ್ಯಕ್ತಿಗಳು ಕಿತ್ತು, ತೇಗದ ಮರ ಇತ್ತು, ಅದೂ ಇಲ್ಲ. ಈಗ ಸೋಮವಾರಪೇಟೆಯ ಶಿವಲಿಂಗಪುರ ಎನ್ನುವ ಜಾಗದಲ್ಲಿ ಜೋಳ ಹಾಕಿ ಬೆಳೆಯುತ್ತಿದ್ದಾರೆ, ಎರಡು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ.

ಅಧ್ಯಕ್ಷರು:- ಏತಕ್ಕಾಗಿ?

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆಯೆಂದರೆ, ಕೇರಳದಲ್ಲಿ ಗಂಧದ ಎಣ್ಣೆ ಫ್ಯಾಕ್ಟರಿ ಇರುವುದರಿಂದ ಇಲ್ಲಿನ ಗಂಧದ ಮರವೆಲ್ಲಾ ಅಲ್ಲಿಗೆ ಹೋಗಿತ್ತು. ಇಲ್ಲಿ ಅದಕ್ಕೆ ಎಲ್ಲಾ ರೀತಿಯ ಸಹಕಾರ ಸುಲಭವಾಗಿ ಸಿಕ್ಕಿ ಹೋಗುತ್ತಿದೆ. ಆದ್ದರಿಂದ ಅದನ್ನು check ಮಾಡುವುದಕ್ಕೆ ಏನು ಕಾನೂನು ತರುತ್ತಾರೆಂದು ನಾನು ಕೇಳಿದ್ದು ಅಷ್ಟೆ.

ಅಧ್ಯಕ್ಷರು:- ಇರುವುದೇ ಸಾಕು, check ಮಾಡುವುದಕ್ಕೆ ಬೇಕು ಅಷ್ಟೆ, ಅಲ್ಲಿ ಎಲ್ಲಾ check ಮಾಡುವುದಕ್ಕೆ gate ಹಾಕಿಕೊಂಡಿದ್ದಾರೆ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, "ಸಿರಿ ಚಂದನ ವನ ಯೋಜನೆ" ತಮಗೆ ಗೊತ್ತಿದೆ. ಅದನ್ನು implement ಮಾಡಬೇಕು.

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಇವರು ಒಂದು circular issue ಮಾಡಿದ್ದಾರೆ. ಗಂಧದ ಮರವನ್ನು ಕಡಿದರೆ shoot at sight ಎಂದು ಮಾಡಿದ್ದಾರೆ. ಇವರು ಯಾರಿಗೋ ಗುಂಡು ಹಾಕುತ್ತಾರೆ, ಆ ಕಾಡಿನಲ್ಲಿರುವ ಗಿರಿ ಜನರಿಗೆ ಹಾಕುತ್ತೀರಿ.

ಶ್ರೀ ಬಿ. ರಮಾನಾಥ ರೈ:– ಅಲ್ಲಿ ಸಾಕಷ್ಟು ಮಟ್ಟಿಗೆ ಶ್ರೀಗಂಧದ ಮರಗಳ ರಕ್ಷಣೆಯನ್ನು ಮಾಡುವಂಥದ್ದರ ಬಗ್ಗೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕ್ಷರು:– ಮಾನ್ಯ ಮಂತ್ರಿಯವರೆ, ಒಂದು ಕೆಲಸ ಮಾಡಿ, ಈಗ ಗಂಧ ಇದೆಯಲ್ಲಾ ಅದು ಒಂದು ರೀತಿ parasite ಇದ್ದ ಹಾಗೆ, ಅದನ್ನು open areaದಲ್ಲಿ ಹಾಕಿದರೆ ಸರಿಯಾಗಿ ಬೆಳೆಯುವುದಿಲ್ಲ. ಕಾಡಿನ ಮಧ್ಯೆ ಒಳಗಡೆ ಇದನ್ನು ಹಾಕಬೇಕು.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಕೆಲವು ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆದಿರುವಂಥ ಗಂಧದ ಕಾಡು ಏನು ಇದೆ. ಅದನ್ನು ಉಳಿಸುವಂಥದ್ದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಈಶ್ವರ ಖಂಡ್ರೆಯವರೆ, ಬೀದರ್‌ನಲ್ಲಿ ತಾವು ಗಂಧದ ಕಾಡನ್ನು ನೋಡಿದ್ದೀರಾ?

ಶ್ರೀ ಈಶ್ವರ ಖಂಡ್ರೆ:– ಹೌದು, ನೋಡಿದ್ದೇನೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನಮ್ಮ ಚನ್ನರಾಯಪಟ್ಟಣದಲ್ಲಿ 280 ಎಕರೆಯಲ್ಲಿ ಹತ್ತು ಸಾವಿರ ಗಂಧದ ಗಿಡಗಳಿವೆ. ಅದರ ಅಭಿವೃದ್ಧಿಗೆ ಹಣ ಕೊಡಿ ಎಂದು ತುಂಬಾ ಸಲ ಮನವಿಯನ್ನು ಮಾಡಿದೆವು.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ಬೀದರ್‌ನಲ್ಲಿ ಚೆನ್ನಾಗಿ ಮಾಡಿದ್ದಾರೆ. ಆದರೆ ಅದನ್ನು ಬಿಟ್ಟು ಹೊರತಾಗಿ ಇನ್ನು ಗಂಧದ ಮರಗಳಿವೆ, ಅದನ್ನು ಸಹ ಸಂರಕ್ಷಣೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಕೆಲವು ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುವಂಥ ಗಂಧದ ಮರಗಳು ಏನು ಇವೆ...

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಚನ್ನರಾಯಪಟ್ಟಣದಲ್ಲಿ ಬೆಲಸಿಂದ ಪ್ರಕೃತಿ ವನವೆಂದು 280 ಎಕರೆ ಇದೆ. ಅದು ಬೆಂಗಳೂರು ಮತ್ತು ಮಂಗಳೂರಿನ ಮಧ್ಯೆ ಇದೆ. ಅದನ್ನು ಅಭಿವೃದ್ಧಿಪಡಿಸಲು ತಮಗೆ ತುಂಬಾ ಸಾರಿ ಮನವಿ ಮಾಡಿದ್ದೇನೆ. ಅಲ್ಲಿ ಸುಮಾರು 10,000 ಕ್ಕಿಂತಲೂ ಹೆಚ್ಚಿಗೆ ಶ್ರೀಗಂಧದ ಗಿಡಗಳಿವೆ. ತಾವು ಈ ಸಾರಿಯಾದರೂ ಭೇಟಿ ನೀಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ನಮ್ಮ ಕರಾವಳಿ ಭಾಗದಲ್ಲೂ ಬಹಳಷ್ಟು ಇವೆ. ಮೊನ್ನೆ ಚರ್ಚೆಯಾಗಿದೆ. ಗಂಧದ ಮರ ತಾಲ್ಲೂಕು ಆಫೀಸ್ ಸರ್ಕಾರಿ ಕಾಂಪೌಂಡ್‌ನಲ್ಲಿದ್ದರೂ ತೆಗೆದುಕೊಂಡು ಹೋಗುತ್ತಾರೆ, ಅದಕ್ಕೆ ಅಷ್ಟು ಬೆಲೆ ಇದೆ. ಆದರೆ ಒಂದೇ ಒಂದು ಗಂಧದ ಎಣ್ಣೆ ಕಾರ್ಖಾನೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಖಾಸಗಿಯಲ್ಲಿ ಇಲ್ಲ. ಗಂಧದ ಮರ ಹೆಚ್ಚಾಗಿ ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರಕ್ಕೆ ಹೋಗುತ್ತದೆ. ಆದ್ದರಿಂದ ಮಾನ್ಯ ಸಚಿವರು ರಾಷ್ಟ್ರೀಯ ನೀತಿಯ ಬಗ್ಗೆ ಏನಾದರೂ ಗಂಧದ ಎಣ್ಣೆಯನ್ನು ಖಾಸಗಿಯವರು ಯಾರೂ ಮಾಡಬಾರದು. Government Factoryಯವರು ಮಾಡಬೇಕೆಂದರೆ ಒಂದು ಗಂಧ ಮಾತ್ರ ಉಳಿಯಬಹುದು. ತಾವು ಯಾವುದೇ ಗಂಧದ ಗಿಡವನ್ನು ಬೆಳೆಸಿ, ಒಂದು ಗಿಡವಿದ್ದರೂ ರಾತ್ರಿ ಬಂದು ಕಿತ್ತುಕೊಂಡು ಹೋಗುತ್ತಾರೆ.

ಶ್ರೀ ಬಿ. ರಮಾನಾಥ ರೈ:– ಗಂಧದ ಕೃಷಿ ಮಾಡುವುದಕ್ಕೂ ಕೂಡ ಹಿಂದೆ ಅವಕಾಶವಿರಲಿಲ್ಲ. ಆದರೆ ಇತ್ತೀಚೆಗೆ ಗಂಧದ ಕೃಷಿ ಮಾಡುವುದಕ್ಕೆ.. ..

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಖಾಸಗಿಯವರು ಕಾಡನ್ನು ಬೆಳೆಸುವುದಕ್ಕೆ 50–50ಯಲ್ಲಿ ಉತ್ತೇಜನ ಕೊಡುತ್ತೇವೆಂದು ಹೇಳಿ, ತಿದ್ದುಪಡಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಿದ್ದಾರೋ, ಇಲ್ಲವೋ ಗೊತ್ತಿಲ್ಲ. ಆ ರೀತಿ ಮಾಡಿದರೆ ಜನರು ಮಾಡುತ್ತಾರೆ.. ..

ಶ್ರೀ ಬಿ. ರಮಾನಾಥ ರೈ:- ಈಗ ಖಾಸಗಿಯವರು ಕೂಡ ಗಂಧದ ವ್ಯವಸಾಯ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಕೂಡ ಪ್ರೋತ್ಸಾಹ ಕೊಡುತ್ತಿದೆ. ಕೃಷಿ ಅರಣ್ಯ ಪ್ರೋತ್ಸಾಯದಡಿಯಲ್ಲಿ ಅವರಿಗೆ ಎಲ್ಲಾ ರೀತಿಯ ಸೌಕರ್ಯವನ್ನು ಕೊಡುವಂಥದ್ದನ್ನು ಮಾಡುತ್ತಿದ್ದೇವೆ. ಅನೇಕ ಜನ ಖಾಸಗಿಯಲ್ಲಿ ಇಂಥ ಮರಗಳನ್ನು ನೆಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಬಹುಶಃ ಅವರ ಬೇಡಿಕೆಗಳನ್ನು ಕೂಡ ಸರಳೀಕರಣ ಮಾಡಬೇಕು, ಇದರ ಮಾರಾಟ, ಸಾಗಾಟವನ್ನೂ ಕೂಡ ಸರಳೀಕರಣ ಮಾಡಬೇಕೆಂಬ ಬೇಡಿಕೆ ಕೂಡ ಇದೆ. ಒಂದು ಕಡೆ ರಕ್ಷಣೆ ಮಾಡುವಂಥ ಕೆಲಸವನ್ನು ಕೂಡ ಮಾಡಬೇಕು. ಇನ್ನೊಂದು ಕಡೆ ಸರಳೀಕರಣದ ರೀತಿಯಲ್ಲಿ ಅದನ್ನು ಮಾರಾಟ ಮಾಡುವಂಥದ್ದರ ಬಗ್ಗೆಯೂ ಕೂಡ ಆಲೋಚನೆ ಮಾಡುವ ಅಗತ್ಯವಿದೆಯೆನ್ನುವುದು ಕೂಡ ಸತ್ಯವಾದ ವಿಚಾರ. ಆದ್ದರಿಂದ ಇವತ್ತು ನಮ್ಮ ಕರ್ನಾಟಕ ರಾಜ್ಯವನ್ನು ಗಂಧದ ನಾಡು ಎಂದು ಕರೆಯುವುದು. ನಮ್ಮಲ್ಲಿ ಗಂಧವನ್ನು ದೊಡ್ಡ ಪ್ರಮಾಣದಲ್ಲಿ ರಕ್ಷಣೆ ಮಾಡಿಕೊಂಡು ಬಂದಿದ್ದೇವೆ. ಮುಂದಿನ ದಿವಸಗಳಲ್ಲಿ ಇದನ್ನು ಗಂಧದ ನಾಡನ್ನಾಗಿ ಮಾಡಬೇಕೆನ್ನುವಂಥ ಅಪೇಕ್ಷೆ ಕೂಡ ನಮ್ಮದಿದೆ. ಜಿಲ್ಲೆಗಳ ಕೆಲವು ಭಾಗಗಳಲ್ಲಿ ಇದನ್ನು ರಕ್ಷಣೆ ಮಾಡುವುದಕ್ಕೆ chain link mesh ಹಾಕಿ, ಅನೇಕ ಕಡೆಗಳಲ್ಲಿ ಬಂದ್ ಮಾಡಿದ್ದೇವೆ. ಅದನ್ನು ರಕ್ಷಣೆ ಮಾಡುವಂಥ ಕೆಲಸ ಯಶಸ್ವಿಯಾಗಿದೆ. ಅದನ್ನು ಕಾಯುವುದಕ್ಕೆ ಇವತ್ತು ಸಿಬ್ಬಂದಿಗಳನ್ನು ಹಾಕಿ, ರಕ್ಷಣೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಗಂಧದ ಕಾಡುಗಳು ಉಳಿದಿರುವಂಥದ್ದು ರಕ್ಷಣೆ ಮಾಡಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇವತ್ತು ಸ್ವಂತ ಉಪಯೋಗಕ್ಕಾಗಿ ಬೀಟೆ ಮರಗಳನ್ನು ಉಪಯೋಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸ್ವಲ್ಪ ಸಮಸ್ಯೆಗಳಿವೆ. ತಾವು ಅದಕ್ಕೆ ಕಾನೂನು ತಿದ್ದುಪಡಿ ತರಬೇಕೆಂಬ ಮಾತನ್ನು ಹೇಳಿದ್ದೀರಿ. ತಮ್ಮ ಅಪೇಕ್ಷೆ ಏನು ಇದೆ, ಇವತ್ತು ಉಪ ಅರಣ್ಯ ಸಂರಕ್ಷಾಧಿಕಾರಿ ಮಟ್ಟದಲ್ಲಿ ಆದೇಶ ಹೊರಡಿಸಲು ತಾವು ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಸಹ ಹೇಳಿದ್ದೀರಿ. ಅದಕ್ಕೆ ಒಂದು ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಏಕೆಂದರೆ, ಇದು ಸ್ವಂತ

ಉಪಯೋಗಕ್ಕಾಗಿ ಮಾಡುವಂಥ ಬೀಟೆ ಮರಗಳನ್ನು ಬಳಸಿಕೊಳ್ಳುವ ಪ್ರಕ್ರಿಯೆಗೆ ಒಂದು ಸರಳೀಕರಣ ರೀತಿಯಲ್ಲಿ ಮಾಡಬೇಕೆನ್ನುವಂಥದ್ದು ತಮ್ಮ ಅಪೇಕ್ಷೆ, ಅದಕ್ಕೂ ಕೂಡ ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ತಾವು ಮತ್ತು ಮಾನ್ಯ ಅಪ್ಪಚ್ಚು ರಂಜನ್‌ರವರು ರಸ್ತೆಯ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಸುಬ್ರಮಣ್ಯಕ್ಕೆ ಸಂಪರ್ಕ ಕಲ್ಪಿಸುವ ಕಡಮಕಲ್ ರಸ್ತೆಯ ಬಗ್ಗೆ ಹೇಳಿದ್ದೀರಿ. ನಾವು ಅನುಮತಿ ಇಲ್ಲದೇ ಮಾಡುವುದಕ್ಕೆ ಅವಕಾಶವಿಲ್ಲವೆಂಬುದು ತಮಗೆಲ್ಲಾ ಗೊತ್ತಿದೆ. ಆದರೆ ತಾವು FC Actನಲ್ಲಿ ಅರ್ಜಿ ಹಾಕಿದ್ದೀರೆಂಬುದು ನನ್ನ ಗಮನಕ್ಕೆ ಬಂತು. ಆದರೆ ಕರ್ನಾಟಕ ರಾಜ್ಯ ವನ್ಯಜೀವಿ, ಇದರ ಅನುಮತಿಯನ್ನು ಪಡೆಯಬೇಕಾಗಿದೆ.

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಅಧ್ಯಕ್ಷರೆ, total land ಎಷ್ಟು ಇದೆ, ಅದರ double ಕೊಡಬೇಕೆಂದು ಇದೆ, ಆ ಪ್ರಕಾರ ಒಟ್ಟು ನಾಲ್ಕು ರಸ್ತೆಗಳು ಬರುತ್ತದೆ, 12 ಎಕರೆ ಬರುತ್ತದೆ, ಅದಕ್ಕೆ 48 ಎಕರೆ ಕೊಟ್ಟಿದ್ದೇವೆ. ಅದನ್ನು ಹಿಂದೆ State Wildlife Boardಗೆ ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರಿದ್ದು, ಮಾನ್ಯ ಅರಣ್ಯ ಮಂತ್ರಿಯವರು ಉಪಾಧ್ಯಕ್ಷರು ಇದ್ದು, ಅಲ್ಲಿಗೆ ಬಂದಿತ್ತು. ಈಗ ಮತ್ತೆ ಹಿಂದಿನವರದನ್ನು ಹೇಳಬೇಕಾಗುತ್ತದೆ, ಮತ್ತೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ತಪ್ಪು ಮಾಡಿ, ಅದನ್ನು ಯಾರೋ ಕ್ರಿಕೇಟ್ ಆಡುವವರಿಗೆ ಕೊಟ್ಟು, ಅವರು ಅಲ್ಲಿ ಏನು ಆಟವಾಡಿಲ್ಲ. ಈಗ ನೀವಾದರೂ ಅದಕ್ಕೆ ಅನುಮತಿ ಕೊಡಿಸಿ ಎಂದು ಕೇಳುತ್ತಿದ್ದೇವೆ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ರಾಜ್ಯ ವನ್ಯಜೀವಿ ಮಂಡಳಿಯಲ್ಲಿ.. ..

ಶ್ರೀ ಕೆ.ಜಿ. ಬೋಪಯ್ಯ:- ಒಂದು ನಿಮಿಷ, ತಾವು ಅದರಲ್ಲಿ ಉಪಾಧ್ಯಕ್ಷರಾಗಿದ್ದೀರಿ. ನಿಮಗೆ ಅಧಿಕಾರವಿದೆ, ಅದನ್ನು ಕೊಡಿ. ಕೆಲವು limitations ಇದೆ, ಅಲ್ಲಿಗೆ ಹೋಗುವಂಥ ದೊಡ್ಡ ದೊಡ್ಡ ವಿಷಯಗಳಾದರೆ ಅಲ್ಲಿಗೆ ಕಳುಹಿಸಬೇಕು. ಇದು 6 ಎಕರೆ ಇರುವಂಥದ್ದು, ತಾವು ರೂಲ್ಸ್ ತೆಗೆದು ನೋಡಿ.

ಅಧ್ಯಕ್ಷರು:– ಈಗ 6 ಎಕರೆ ಆದರೆ, ಇವರಿಗೆ power ಇದೆ.

ಅಧ್ಯಕ್ಷರು:– ಬೋಪಯ್ಯನವರೆ, 6 ಎಕರೆ within 10 ಎಕರೆವರೆಗಾದರೆ Central Government ಗೆ ...

ಶ್ರೀ ಕೆ.ಜಿ. ಬೋಪಯ್ಯ:– ಇವರಿಗೆ powers ಇದೆ.

ಅಧ್ಯಕ್ಷರು:– ಅವರ Division ಇದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಇದು 6 ಎಕರೆಗಿಂತ ಜಾಸ್ತಿ ಇದೆ.

ಶ್ರೀ ಕೆ.ಜಿ. ಬೋಪಯ್ಯ:– ಇಲ್ಲ.

ಶ್ರೀ ಬಿ. ರಮಾನಾಥ ರೈ:– ಇಲ್ಲವಾ?

ಶ್ರೀ ಕೆ.ಜಿ. ಬೋಪಯ್ಯ:– ಇಲ್ಲ. ಈ ಅಧಿಕಾರಿಗಳು ಹೇಳುವುದು, ಅಲ್ಲಿ ಒಬ್ಬರು ಕುಳಿತಿದ್ದಾರಲ್ಲ, ಅವರ ಮಾತು ಕೇಳಬೇಡಿ. Records ತರಿಸಿ ನೋಡಿ.

ಶ್ರೀ ಬಿ. ರಮಾನಾಥ ರೈ:– ನನ್ನ ಗಮನಕ್ಕೆ ಬಂದ ಹಾಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿ ಬೇಕಾಗಿದೆ ಎಂದು ನಾವು ತಿಳಿದುಕೊಂಡಿರುವಂಥದ್ದು.

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಅರ್ಜಿ ಇದೆ. ನಮ್ಮ ಅರ್ಜಿಯಲ್ಲಿ mention ಮಾಡಿದ್ದಾರೆ. PWD ಯವರು certify ಮಾಡಿದ್ದಾರೆ.

ಅಧ್ಯಕ್ಷರು:– ಅಲ್ಲಿ ಏನು record ಇದೆ ನೋಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– 6 ಅಡಿ existing road. Existing road ಅನ್ನೂ ಸೇರಿಸಿದರೆ ಹೇಗೆ?

ಶ್ರೀ ಬಿ.ಬಿ. ನಿಂಗಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಅದೇ ತರಹದ ಸಮಸ್ಯೆ ನನ್ನ ಕ್ಷೇತ್ರದಲ್ಲಿ ಇದೆ. ಒಂದು ಕುಡಿಯುವ ನೀರಿನ ಯೋಜನೆಗೆ ಕಳಸದಲ್ಲಿ ಇವರ ಇಲಾಖೆಯಿಂದ ಒಪ್ಪಿಗೆ ಕೊಡುತ್ತಿಲ್ಲ. ಅದು ಸುಮಾರು 8 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಸುಮಾರು 6 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ನಾವು ಕೇಳುತ್ತಲೇ ಇದ್ದೇವೆ. ಇನ್ನೂ ಕೂಡ forest ನಿಂದ clearance ಬಂದಿಲ್ಲ. ಹಾಗಾಗಿ ಕಳಸಾ ಪಟ್ಟಣಕ್ಕೆ ಕುಡಿಯುವ ನೀರನ್ನು ಇವತ್ತಿನವರೆಗೂ ಕೊಡುವುದಕ್ಕಾಗಲಿಲ್ಲ. ಬಹಳ ಕಷ್ಟವಾಗಿದೆ.

ಶ್ರೀ ಬಿ. ರಮಾನಾಥ ರೈ:- ತಾವು ಹೇಳಿರತಕ್ಕಂಥದ್ದಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಅದಕ್ಕೆ ಅನುಮತಿ ಕೊಟ್ಟು ನಾವು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಸ್. ಅಂಗಾರ:- ಈಗ ಏನು ಪ್ರಸ್ತಾಪಿಸಿದ್ದಾರೆ ಆ ರಸ್ತೆ ನನ್ನ ಸುಳ್ಯ ಕ್ಷೇತ್ರದಲ್ಲಿ ಬರುವಂಥದ್ದು. ಕಲ್ಮಕಾರು ಕೊಲ್ಲಮೃಗಂನಲ್ಲಿ ಒರಳು ರಸ್ತೆ ಇದೆ. ಅಲ್ಲಿ ಕುದುರೆ ಎಂದು ಮೊದಲೇ ಇತ್ತು. ಅರ್ಧ ರಸ್ತೆ ಇದೆ. ಅದು 6 ಎಕರೆ ಒಳಗೆ ಬರುವಂಥದ್ದು.

ಶ್ರೀ ಕೆ.ಜಿ. ಬೋಪಯ್ಯ:- ಹಿಂದೆ ಎಲ್ಲ ಅಲ್ಲಿ ಕುದುರೆಯಲ್ಲಿ ಓಡಾಡುತ್ತಿದ್ದರು. ಅವರು ಈಗ ಕುದುರೆಯಲ್ಲಿಯೇ ಓಡಾಡಬೇಕೇ? ಅತ್ತಲಾಗಿ ಅವರಿಗೆ ಕುದುರೆಯನ್ನಾದರೂ ಕೊಟ್ಟುಬಿಡಿ.

ಶ್ರೀ ಬಿ. ರಮಾನಾಥ ರೈ:- ಮೊದಲೆಲ್ಲ ಹೋಗುತಿತ್ತು ಬರುತ್ತಿತ್ತು ಎಲ್ಲ ಆಗುತಿತ್ತು. ಈಗ Wild Life ವ್ಯಾಪ್ತಿಗೆ ಸೇರಿರುವುದರಿಂದ ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ಆದಷ್ಟು ಬೇಗ ಇದು ಇತ್ಯರ್ಥವಾದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಬಿಡುಗಡೆ ಮಾಡುವ ವಿಚಾರ ಇದೆಯಲ್ಲ, ನಿಮ್ಮ ಅಧಿಕಾರಿಗಳು ತುಂಬಾ ವಿಳಂಬ ಮಾಡುತ್ತಾರೆ. ನಮ್ಮ ಜೋಗದಲ್ಲಿ ಕೇವಲ 10 ಗುಂಟೆ ಜಾಗ, ಅಲ್ಲಿ ಹೋಟೆಲ್ ಕಟ್ಟುವುದಕ್ಕೆ ಜಾಗ ಕೊಟ್ಟಿದ್ದಾರೆ,

ಕಟ್ಟಿಕೊಂಡಿದ್ದಾನೆ. ಆ 10 ಗುಂಟೆ ಜಾಗಕ್ಕೆ ಅವರು alternative ಜಾಗ ಕೊಡುತ್ತಾರೆ. ಅದಕ್ಕೆ phone ಎಷ್ಟು ಮಾಡಬೇಕು, ಬರೆಯಬೇಕು, ಹೀಗಾಗಿದೆ.

ಶ್ರೀ ಬಿ. ರಮಾನಾಥ ರೈ:– ತಮಗೆ ಗೊತ್ತಿದೆ ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಅದೇ ಭಾಗದಿಂದ ಬಂದವರು. ಎಷ್ಟೋ ವರ್ಷಗಳಿಂದ ಈ ಸಮಸ್ಯೆ ಇದ್ದಿರತಕ್ಕಂಥದ್ದು. ಇದು ವನ್ಯ ಜೀವಿ ಧಾಮದಲ್ಲಿ ರಸ್ತೆ ಆಗಬೇಕಾದರೆ ಏನೇನು ಕ್ರಮ ಕೈಗೊಳ್ಳಬೇಕೆನ್ನುವುದು ಹೊಸತೇನಲ್ಲ. ಅಭಯಾರಣ್ಯದಲ್ಲಿ ಯಾವ ರೀತಿ ಆಗಬೇಕೆನ್ನುವುದರಲ್ಲಿ ಬಹುಶಃ ತಮ್ಮ ಸಮಸ್ಯೆಗಳು ಖಂಡಿತ ಇದೆ. ಅದಕ್ಕೆ ಯಾವ ರೀತಿಯಲ್ಲಿ ಕಾನೂನು ಚೌಕಟ್ಟಿನಲ್ಲಿ ಪರಿಹಾರ ಮಾಡಬೇಕಾಗಿದೆ ಅದಕ್ಕೆ ಸೂಕ್ತವಾದ ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಖ್ಯವಾಗಿ deemed forest, ಬಹುಶಃ ಇದರ ಬಗ್ಗೆ ನಾವು ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಈಗಾಗಲೇ ನಿಶ್ಚಯ ಮಾಡಿದ್ದೇವೆ. ಕಳೆದ Cabinet ನಲ್ಲಿ 6 ತಿಂಗಳ ಒಳಗಡೆ ಇದರ ಬಗ್ಗೆ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾ ಮಟ್ಟದಲ್ಲಿ ವಿಭಾಗೀಯ ಮಟ್ಟದಲ್ಲಿ ಸಮಿತಿಯನ್ನು ಮಾಡಿದ್ದೇವೆ. ಅರಣ್ಯ ಪ್ರದೇಶ ಯಾವುದು ಎನ್ನುವುದು, deemed forest ಗೆ ವ್ಯಾಖ್ಯಾನ ಇಲ್ಲ ಎನ್ನುವ ಚರ್ಚೆ ಕೂಡ ನಡೆಯುತ್ತಿದೆ. ಆದರೆ, ಒಂದು ಸಂದರ್ಭದಲ್ಲಿ affidavit ಅನ್ನು ಸಹ ಹಿಂದಿನ ಸಂದರ್ಭದಲ್ಲಿ ಕೊಟ್ಟಿರತಕ್ಕಂಥದ್ದು, ಈ ಕೆಲವು ಪ್ರದೇಶಗಳನ್ನು ಇಂಥ forest ವ್ಯಾಪ್ತಿಗೆ ಸೇರಿಸತಕ್ಕಂಥದ್ದು, ಆ ಪ್ರದೇಶ ಎನ್ನುವಂಥದ್ದು ಇದೆ. ಅದನ್ನು ನಾವು ಮತ್ತೆ ಪರಿಷ್ಕರಣೆ ಮಾಡಿ ಮತ್ತೊಮ್ಮೆ affidavit ಕೊಟ್ಟು ಈ ಕಂದಾಯ ಜಮೀನನ್ನು deemed forest position ನಲ್ಲಿರತಕ್ಕಂಥ ಪ್ರದೇಶವನ್ನು ಕಂದಾಯ ಇಲಾಖೆಯಿಂದ ಎತ್ತಿ ಬಿಟ್ಟು ಕೊಡುವಂಥ . ..

ಶ್ರೀ ಕೆ.ಜಿ. ಬೋಪಯ್ಯ:– ಈ deemed forest ಎಂದು ಹೇಳಿದರು. ಅದರ ಅರ್ಥ ಹೇಳಿಕೊಡಿ. Forest Act ನಲ್ಲಿ ಯಾವಾಗ ತಿದ್ದುಪಡಿ ಮಾಡಿ ಅದನ್ನು ಸೇರಿಸಿದ್ದೀರಿ?

ಅಧ್ಯಕ್ಷರು:– Deemed forest ಎನ್ನುವಂಥದ್ದು ಇಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಮತ್ತೆ ಏಕೆ ಇವರು deemed forest ಎಂದು ಹೇಳುತ್ತಾರೆ.

ಅಧ್ಯಕ್ಷರು:– ಈಗ ಸಚಿವರು ಆ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಮಾಡಿ.

ಶ್ರೀ ಸಿ.ಟಿ. ರವಿ:– ಪಹಣಿಯಲ್ಲೂ deemed forest ಎಂದು ಬರುವುದಕ್ಕೆ ಪ್ರಾರಂಭವಾಗಿದೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಯಾವುದೇ land ಅನ್ನು forest ಗೆ ಸೇರಿಸಬೇಕಾದರೆ Section–5 ರಲ್ಲಿ notify ಮಾಡಬೇಕು. ಆಮೇಲೆ Section–6 ರಲ್ಲಿ Settlement Officer ಆಗಬೇಕು. Objection call ಮಾಡಬೇಕು.

(ಗೊಂದಲ)

ಅಧ್ಯಕ್ಷರು:– ಬೇಡ, ಈಗ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಈಗ ಉತ್ತರ ಕೊಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– Forest land ಎಂದು declare ಮಾಡುವುದಕ್ಕೆ ಇವರಿಗೆ ಅಧಿಕಾರವೇ ಇಲ್ಲ, final declaration by the Deputy Commissioner. ಇವರು ಹೇಗೆ ನಮ್ಮದು forest ಎಂದು ಹೇಳಿಕೊಂಡು ಇರುವುದು.

ಶ್ರೀ ಬಿ. ರಮಾನಾಥ ರೈ:– Deemed forest ಎಂದು CEC ಯವರು ಅದಕ್ಕೆ ...

ಶ್ರೀ ಕೆ.ಜಿ. ಬೋಪಯ್ಯ:– ಕಾನೂನು ಎನ್ನುವುದು. . . ಹಾಗಾದರೆ forest ಕಾಯಿದೆ ಬೇಡವೇ?

ಶ್ರೀ ಬಿ. ರಮಾನಾಥ ರೈ:– ಈಗ ಆ ಚರ್ಚೆ ಅಗತ್ಯವಿಲ್ಲ. ಏಕೆಂದರೆ, ಬೇಗ ಬೇಗ ಮಾಡಬೇಕೆನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಈಗಾಗಲೇ ನಾವು ಅದಕ್ಕೆ ವಿಭಾಗೀಯ ಮಟ್ಟದ ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಸಮಿತಿಗಳನ್ನು ಮಾಡಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– ಆಯಿತು. ಈಗಲಾದರೂ ಆದಷ್ಟು ಬೇಗ ಮಾಡಿ.

ಅಧ್ಯಕ್ಷರು:– ಒಂದು ಕೆಲಸ ಮಾಡಿ ಮಹಾರಾಯರೆ, ಈಗ ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಸಮಿತಿ ಮಾಡಿದ್ದೀರಿ. ಆ ಸಮಿತಿಗಳು ಸಾರ್ವಜನಿಕರಿಂದ representation ಬಂದು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಏಕೆ ಹೇಳುತ್ತಿದ್ದೇನೆ ಎನ್ನುವುದನ್ನು ಕೇಳಿ. ಈಗ ನಮ್ಮ ಅಧಿಕಾರಿಗಳು ನಿರ್ಭಯವಾಗಿ ತಮ್ಮ ಅಭಿಪ್ರಾಯವನ್ನು ಹೇಳುವಂಥ ಪರಂಪರೆ ಬಿಟ್ಟುಕೊಂಡು ಕುಳಿತಿದ್ದಾರೆ. ನಾನು ಮೊನ್ನೆ ಹೋಗಿದ್ದೆ. 30–40 ಜನರಿಗೆ ಅವರು ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಟ್ಟದ ಸಮಿತಿ ಏನಿದೆ, ಅದಕ್ಕೆ ಶಾಸಕರನ್ನಾದರೂ Member ಮಾಡುವಂಥ ವ್ಯವಸ್ಥೆ ಮಾಡಿ. ನೀವು ಸದಸ್ಯರಗಳನ್ನಾಗಿ ಎಲ್ಲ ಅಧಿಕಾರಿಗಳನ್ನೇ ಮಾಡಿದ್ದೀರಿ. ಅಧಿಕಾರಿಗಳು ಅವರ ಮೂಗಿನ ನೇರಕ್ಕೆ ಮಾತನಾಡುತ್ತಾರೆ, ಅವರ ಮೂಗಿನ ನೇರಕ್ಕೆ ಕೆಲಸವನ್ನು ಮಾಡುತ್ತಾರೆ. ಶಾಸಕರನ್ನು ತೆಗೆದುಕೊಳ್ಳುವಂಥ ಕೆಲಸ ಮಾಡಿ. ಆ ಸಮಿತಿಗೆ ಸೇರಿಸಿ. ಈಗ ಎಲ್ಲಾ ಅಧಿಕಾರಿಗಳು ಮಾತ್ರ ಆ ಸಮಿತಿಯಲ್ಲಿದ್ದಾರೆ.

ಶ್ರೀ ಬಿ. ಬಿ. ನಿಂಗಯ್ಯ:- ಬರೀ ಅಧಿಕಾರಿಗಳ ಸಮಿತಿ ಆದರೆ ಅದು one side ಆಗುತ್ತದೆ. ಬರೀ ಅಧಿಕಾರಿಗಳ ಸಮಿತಿ ಆದರೆ ಜನಾಭಿಪ್ರಾಯವನ್ನು ಹೇಳಿಕೊಳ್ಳುವುದಕ್ಕೆ ಶಾಸಕರಿಗೆ ಒಂದು ಅವಕಾಶ ಮಾಡಿ.

ಶ್ರೀ ಬಿ. ರಮಾನಾಥ ರೈ:- ಈಗ ತಮಗೆ ಗೊತ್ತಿದೆ. ಅರಣ್ಯ ಕಾಯಿದೆ Section-4 to 17 ಆಗುವ ವರೆಗೆ forest ಗೆ ಸೇರಿರತಕ್ಕಂಥದ್ದು ಅಲ್ಲ ಎನ್ನುವುದು ತಮ್ಮ ಒಂದು ವ್ಯಾಖ್ಯಾನ. ಆದರೆ, ಕಾನೂನಿನ ವ್ಯಾಪ್ತಿಯಲ್ಲಿ Section-4 ಆದ ತಕ್ಷಣ ಅದು ಅರಣ್ಯ ಎಂದು ಹೇಳತಕ್ಕಂಥದ್ದು. ಅದು ಈಗ ಚರ್ಚೆ ಬೇಡ. ಏಕೆಂದರೆ, 1997ರಲ್ಲಿ ಒಂದು affidavit ಕೊಟ್ಟಿರತಕ್ಕಂಥದ್ದು. ಅನಂತರ ನಾವು ಮತ್ತೆ ಈ ಸಾರಿ ಪರಿಷ್ಕೃತವಾದ affidavit ಸಲ್ಲಿಸಲು ಸರ್ಕಾರ ಒಂದು ನಿರ್ಧಾರ ಮಾಡಿದೆ. ನಾವು Cabinet ನಲ್ಲಿ ಅದನ್ನಿಟ್ಟು 6 ತಿಂಗಳ ಕಾಲ, ಇವತ್ತು ಈ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ವಿಭಾಗೀಯ ಮಟ್ಟದ ಸಮಿತಿಗಳು ಪರಿಶೀಲನೆ ಮಾಡಿ ಯಾವುದು forest nature ಅಲ್ಲದಂಥ ಜಾಗ ಇದೆ, ಅದನ್ನು ವಿರಹಿತ ಮಾಡಬೇಕೆನ್ನುವ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಸಾಕಷ್ಟು ಒತ್ತನ್ನು ನಾವು ಕೊಡುತ್ತಿದ್ದೇವೆ. ಅದು ಆಗಬೇಕೆನ್ನುವುದು ನಮ್ಮ ಉದ್ದೇಶ. ನನ್ನ ಮಟ್ಟಿಗೆ ಹೇಳಬೇಕೆಂದರೆ ಇದು ಐತಿಹಾಸಿಕ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:- Forest nature tree ಎಂದರೆ definition ಇದೆ. ಮರ ಎಂದರೆ 2 ಮೀಟರ್ ಎತ್ತರಕ್ಕೆ ಇಂತಿಷ್ಟು ಸೆಂಟಿ ಮೀಟರ್ ಸುತ್ತಳತೆ ಮರ ಎಂದು ಇದೆ. ನಮ್ಮ ಕಡೆ ಒಂದು acacia ಬೆಳೆಸಿ, ಅದು ತೋರುವಿಕೆಗೆ ಕಾಡಾಗಿದೆ. ಅದೂ ಸಹ deemed forest ನಲ್ಲಿ ಬರುತ್ತಿದೆ.

ಅಧ್ಯಕ್ಷರು:- ಏನದು? ಏನೆಂದು ಕಂಡಿದ್ದೀರಿ ಈಗ? ಕಂದಾಯ ಇಲಾಖೆಯ ದಾಖಲೆ ಏನೆಂದು ಕಂಡಿದೆ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾನು ಹೇಳತಕ್ಕಂಥದ್ದು ಆ ಚರ್ಚೆ ಬೇಡ.

ಅಧ್ಯಕ್ಷರು:– ಆಯಿತು.

ಶ್ರೀ ಬಿ. ರಮಾನಾಥ ರೈ:– ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ. ಅದೇನೆಂದರೆ, forest nature ಇಲ್ಲದಂಥ ಪ್ರದೇಶವನ್ನು ನಾವು ಬಿಟ್ಟುಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಚಿಕ್ಕಮಾದು:– Forest nature ಇಲ್ಲದಂಥದ್ದನ್ನು ಬಿಟ್ಟುಕೊಡುವಂಥದ್ದು ಸ್ವಾಗತ. ಅಷ್ಟು ಸಾಕು ನಮಗೆ

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– Forest nature ಎಂದರೆ definition ನಿಮಗೆ ಗೊತ್ತೆ? ಸಾಮಾಜಿಕ ಅರಣ್ಯದಲ್ಲಿ ಕಾಡು ಬೆಳೆಸಿದವರಿದ್ದಾರೆ. ಪಂಚಾಯತ್ ಕಾಡು ಇದೆ. ಸ್ವತಃ ಬೆಳೆಸಿದ ಕಾಡು. ಅದು ಪ್ರಕೃತಿದತ್ತವಾಗಿ ಬೆಳೆದ ಕಾಡಲ್ಲ. ಅದಕ್ಕೆ ನಾನು ಹೇಳುವುದು, ಆ ಸಮಿತಿಯಲ್ಲಿ ಜನಪ್ರತಿನಿಧಿಗಳನ್ನು ಸೇರಿಸಿ. ಚರ್ಚೆಯಾಗಲಿ. ಅವರಿಗೆ ನ್ಯಾಯ ಸಿಗಲಿ.

ಶ್ರೀ ಬಿ. ರಮಾನಾಥ ರೈ:– C & D ಜಾಗವನ್ನು ಹಸ್ತಾಂತರ ಮಾಡಿರತಕ್ಕಂಥ ಕಂದಾಯ, ಇಲಾಖೆ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿರತಕ್ಕಂಥ ಪ್ರದೇಶವೇನಿದೆ, ಇದರ ಬಗ್ಗೆ ತಜ್ಞರ ಸಮಿತಿ (Expert Committee) ಅನ್ವಯ deemed forest ನಲ್ಲಿ ಸೇರಿಸಲ್ಪಟ್ಟಿದ್ದು, ಅದನ್ನೂ ಕೂಡ ನಾವು ಪುನರ್‌ಪರಿಶೀಲನೆ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. Deemed forest ಎಂದು ಅದು . . .

ಅಧ್ಯಕ್ಷರು:– ಒಂದು ಸಾರಿ ಮಾಡಿಬಿಡಿ.

ಶ್ರೀ ಶಿವಾನಂದ ಎಸ್. ಪಾಟೀಲ್:– ನಮ್ಮ ಕಡೆ ಬಯಲುಸೀಮೆ ಇದೆ. Forest ಇಲ್ಲಿ ಉಳಿದಿಲ್ಲ. ನೀವು ಅಲ್ಲೇನು ಮಾಡುತ್ತೀರಿ? ನಮ್ಮ ನಮ್ಮ district

ನಲ್ಲಿ ಸ್ವಲ್ಪ ಉಳಿದಿದೆ. 5% – 10% ಇದೆ. ನೀವು ಆಕಸ್ಮಾತ್ ಈ ವ್ಯಾಖ್ಯಾನ ಮಾಡುವುದರಲ್ಲಿ ನಮ್ಮೆಲ್ಲೆಲ್ಲ ಬಯಲು ಸೀಮೆಯೇ ಆಗಿ ಹೋಗಿಬಿಡುತ್ತದೆ.

ಶ್ರೀ ಬಿ. ರಮಾನಾಥ ರೈ:– ಈಗ ಅದನ್ನು ನಾವು ವಿರಹಿತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವಲ್ಲ. ಈಗ ಆ ಚರ್ಚೆ ಏಕೆ?

ಶ್ರೀ ಶಿವಾನಂದ ಎಸ್. ಪಾಟೀಲ್:– ಒಂದು ಏನಾಗುತ್ತಿದೆ ಎಂದರೆ, sawmill ಗೆ ಇವರು permission ಕೊಡುತ್ತಿದ್ದಾರೆ. ಇದನ್ನು Supreme Court ban ಮಾಡಿದೆ. ನಮ್ಮ ಸಣ್ಣ ಸಣ್ಣ ಹಳ್ಳಿಯಲ್ಲಿ ಗಿಡ ಕಡಿದುಹಾಕತಕ್ಕಂಥ ಪ್ರವೃತ್ತಿ ಬೆಳೆದುಬಿಟ್ಟಿದೆ. ನಮ್ಮಲ್ಲಿ forest ಉಳಿದಿಲ್ಲ. ಎಲ್ಲ ಬಯಲುಸೀಮೆ. ಇನ್ನೂ ತೀರಾ ಬಯಲುಸೀಮೆ ಆಗಬಾರದು.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಬಿ. ರಮಾನಾಥ ರೈ:– ಇದರ ಬಗ್ಗೆ ಸಾಕಷ್ಟು ಚರ್ಚೆ ಬಹಳಷ್ಟು ಸಂದರ್ಭಗಳಲ್ಲಿ ಆಗಿದೆ. Deemed forest ನಲ್ಲಿ ಆಗತಕ್ಕಂಥ ತೊಂದರೆಗಳು, ಅದನ್ನು ಸರಿಪಡಿಸಬೇಕೆನ್ನುವಂಥ ಬೇಡಿಕೆಗಳು, ಅದನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– 40–50 ವರ್ಷಗಳಿಂದ ಸರ್ಕಾರಿ ಜಮೀನುಗಳಲ್ಲಿ ಮನೆ ಕಟ್ಟಿಕೊಂಡು ಕುಳಿತಿದ್ದಾರೆ. ಇವರು ಸಾಧಾರಣ 1000 ಎಕರೆ C & D land RTC ಯಲ್ಲಿ entry ಮಾಡಿದ್ದಾರೆ. ನಾವು ಬಗರ್‌ಹುಕುಂನಲ್ಲಿ ಮಂಜೂರು ಮಾಡಿದ್ದೇವೆ. ಮಂಜೂರು ಮಾಡಲಿಕ್ಕೂ ಆಗುವುದಿಲ್ಲ. RTC ಯಲ್ಲಿ C & D ಎಂದು ಮಾಡಿದ್ದಾರೆ. ಒಂದು, deemed C and D, ಮತ್ತೊಂದು ಕುಮ್ಕಿ.

ಅಧ್ಯಕ್ಷರು:– ಈಗ C & D class ಅನ್ನು ಹಿಂದೆ hand over ಮಾಡಿದ್ದು ನಿಜ ಇತ್ತು. 91 ರಲ್ಲಿ unauthorized cultivation regularization ಮಾಡುವುದಕ್ಕೆ 94(ಎ) ಕಾನೂನು ಏನು ತಂದೆವು, ಆ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವವಾಗಿ, ಯಾವ C & D class ನಲ್ಲಿ actual ಆಗಿ forest

ಬೆಳೆದಿದ್ದಾರೆ, ಅದನ್ನು ಬಿಟ್ಟು ಉಳಿದದ್ದನ್ನು ವಾಪಸ್ ತೆಗೆದುಕೊಂಡ ಒಂದು G.O. ಇದೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಅಲ್ಲ ಸಾರ್, Government Order ಇದೆ. ಆದರೂ ಇವತ್ತು ಅರಣ್ಯ ಇಲಾಖೆಯಿಂದ ವಾಪಸ್ ತೆಗೆದುಕೊಳ್ಳಲಿಕ್ಕೆ ಸರ್ಕಾರಕ್ಕೆ ಆಗಲಿಲ್ಲವಲ್ಲ.

ಅಧ್ಯಕ್ಷರು:– ಅದಕ್ಕೇ ಈ ಸಮಸ್ಯೆಯನ್ನು ಬಗೆಹರಿಸಿಕೊಡಿ ಎಂದು ಹೇಳಿದ್ದು.

ಶ್ರೀ ಎಸ್. ಅಂಗಾರ:– ನಾನು ಮಾತನಾಡುವ ಹೊತ್ತಿಗೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾನಾ, ಬಾಣೆ, ಕುಮ್ಕಿ ಆ ಜಾಗ ಪಟ್ಟದಾರರಿಗೆ ಸಂಬಂಧಪಟ್ಟಂತೆ ಸೊಪ್ಪು, ಕಟ್ಟಿಗೆಗೆ ಮತ್ತು ಗಿಡಮರ ಬೆಳೆಸಿದ್ದಾರೆ. ಈಗ ಕಂದಾಯ ಇಲಾಖೆಯವರು ಆ ಖಾನಾ ಮತ್ತು ಬಾಣೆಯನ್ನೂ ಕೂಡ C & D ಎಂದು ಮಾಡಿ ಅದನ್ನೂ ಕೂಡ forest ಗೆ hand over ಮಾಡಿದ್ದಾರೆ. ಅದು ದೊಡ್ಡ ಸಮಸ್ಯೆ. ಅದರ ಬಗ್ಗೆಯೂ ಕೂಡ ಸಚಿವರಿಗೆ ಗೊತ್ತು. ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ:– ಬೇರೆ ಬೇರೆ ರೀತಿಯ ಪ್ರದೇಶಗಳು land bank ಗೆ ಕೊಟ್ಟಿರುವ ಜಾಗವನ್ನು ಬಹುಶ: . . .

ಅಧ್ಯಕ್ಷರು:– ಬೋಪಯ್ಯನವರೆ, ಇದು ಏಕೆ ಆಗಿದೆ ಎಂದರೆ, High Court ನವರು ಒಂದು ತೀರ್ಮಾನ ಮಾಡಿಟ್ಟಿದ್ದಾರೆ. ಅವೆಲ್ಲ revenue land.

ಶ್ರೀ ಬಿ. ರಮಾನಾಥ ರೈ:– ಇದರ ಬಗ್ಗೆ ನಾವೊಂದು deemed forest ಅನ್ನು ವಿನಾಯಿತಿ ಮಾಡುವುದಕ್ಕೆ ನಾನು detail ಆಗಿ ಹೇಳುವುದಕ್ಕೆ ಬಹುಶಃ ಸಮಯವೂ ಇಲ್ಲ.

ಅಧ್ಯಕ್ಷರು:– ಆಯಿತು. ಒಟ್ಟಿನಲ್ಲಿ ಈಗ ಬಂದಿರುವ ಸಮಸ್ಯೆಯನ್ನು ನೀವು ಬಗೆಹರಿಸಿಕೊಡಿ.

ಶ್ರೀ ಬಿ. ರಮಾನಾಥ ರೈ:- Detail ಆಗಿ ಹೇಳಬೇಕೆಂದರೆ, Deemed forest ಅನ್ನು ಅದಕ್ಕೆ forest nature ಇಲ್ಲದಿರುವ ಭಾಗವನ್ನು ಕಂದಾಯ ಇಲಾಖೆ ಕೂಡ ಸಾರ್ವಜನಿಕ ಉದ್ದೇಶಕ್ಕಾಗಿ ಅದನ್ನು ಉಪಯೋಗ ಮಾಡಲಿಕ್ಕೆ ಅನುವು ಮಾಡಿಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್:- ಶ್ರೀ ಶಿವಾನಂದ ಪಾಟೀಲರು ಹೇಳಿದ್ದನ್ನು ತಾವು ದಯಮಾಡಿ ಗಮನದಲ್ಲಿಟ್ಟುಕೊಳ್ಳಬೇಕು. ಮುಂದೆ ಬಹಳ ದೊಡ್ಡ ಅನಾಹುತವಾಗುತ್ತದೆ. ಮತ್ತೆ ಸಮಸ್ಯೆಗಳು ಉದ್ಭವವಾಗುತ್ತವೆ. ಒಂದೇ ಸಲ ಸಾರ್ವತ್ರಿಕವಾಗಿ ನಿರ್ಣಯ ತೆಗೆದುಕೊಳ್ಳಬೇಡಿ. ಆಯಾ ಭಾಗದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಆ ತರಹದ ನಿರ್ಣಯ ತೆಗೆದುಕೊಳ್ಳಿ.

ಅಧ್ಯಕ್ಷರು:- ಹಾಗೆ ಮಾಡಿ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಬಿ.ಆರ್. ಪಾಟೀಲರೆ, ಅದಕ್ಕೆ ಜಿಲ್ಲಾ ಮಟ್ಟದ ಸಮಿತಿ ಇದೆ. ಜೊತೆಗೆ ವಿಭಾಗೀಯ ಮಟ್ಟದ ಸಮಿತಿ ಇದೆ, ರಾಜ್ಯ ಮಟ್ಟದ ಸಮಿತಿ ಇದೆ. ಇವನ್ನೆಲ್ಲ ಅವಲೋಕನ ಮಾಡಿಕೊಂಡು ...

ಶ್ರೀ ಶಿವಾನಂದ ಎಸ್. ಪಾಟೀಲ್:- ನಮ್ಮಲ್ಲೆಲ್ಲ ಬಯಲು ಸೀಮೆ ಆಗಿ ಮಳೆಯೇ ಹೋಗಿ ಬಿಟ್ಟಿದೆ. Sawmill ಗೆ permission ಕೊಟ್ಟು ಕೊಟ್ಟು illegal ಆಗಿ road ಮೇಲೆ ಇದ್ದ ಗಿಡಗಳನ್ನು ಸಹ ಕಡಿದು ಹಾಕಿದ್ದಾರೆ.

ಅಧ್ಯಕ್ಷರು:- ಯಾರು?

ಶ್ರೀ ಶಿವಾನಂದ ಎಸ್. ಪಾಟೀಲ್:- ಜನರು ಕಡಿಯುತ್ತಾರೆ, forest ನವರು ನೋಡುವುದಿಲ್ಲ. ಆಕಸ್ಮಾತ್ ಒಂದೊಂದು ಕಡೆ ಸ್ವಲ್ಪ patch patch ಇದ್ದುದ್ದನ್ನು ಕೂಡ ಕಡಿದು ಹಾಕಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- Forest ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಈಗಲೂ ಅರಣ್ಯ ಸಚಿವರಿಗೆ ಉತ್ತರ ಕೊಡುವುದಕ್ಕೆ ಬಿಡದಿದ್ದರೆ ಹೇಗೆ? ಪ್ರತಿಯೊಂದು ಸಣ್ಣ ಸಣ್ಣ ವಿಚಾರಕ್ಕೂ ಈಗ ನಾವು ಎದ್ದು

ನಿಂತು ಮಾತನಾಡಿದರೆ ಅರಣ್ಯ ಸಚಿವರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಬಿ. ರಮಾನಾಥ ರೈ:– ಈ Deemed forest ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಯಾವುದು deemed forest, ಜಿಜ್ಞಾಸೆಗಳು ಇವೆ. ನಾವೀಗ forest nature ಇಲ್ಲದಂಥ ಪ್ರದೇಶ ಏನಿದೆ, ಅದನ್ನು ಕಾನೂನಿನ ಚೌಕಟ್ಟಿನೊಳಗೆ Supreme Court ಗೆ affidavit ಕೊಡುವಂಥದ್ದು ಮಾಡಿ ಅದನ್ನು ವಿರಹಿತ ಮಾಡಬೇಕೆನ್ನುವಂಥ ನಿರ್ಧಾರಕ್ಕೆ ಸರ್ಕಾರ ಬಂದಿದೆ. Cabinet ನಲ್ಲಿ ಇದಕ್ಕೆ ಒಪ್ಪಿಗೆಯನ್ನು ಪಡೆದಿದ್ದೇವೆ. 6 ತಿಂಗಳೊಳಗೆ ಇದನ್ನು ನಾವು ಕೂಲಂಕಷವಾಗಿ ಪರಿಶೀಲಿಸಿ ಅದು C & D ಜಾಗ ಆಗಿರಬಹುದು, ತಾವು ಹೇಳಿರತಕ್ಕಂಥ ಕುಮ್ಕಿ ಪ್ರದೇಶ ಇದ್ದಿರಬಹುದು, ಎಲ್ಲವೂ ಕೂಡ ಅದರಲಿ ಅಡಕವಾಗಿಸಿಕೊಂಡು ಎಲ್ಲವನ್ನು ಸರಿಪಡಿಸತಕ್ಕಂಥ ತೀರ್ಮಾನಕ್ಕೆ ನಾವು ಬರುತ್ತೇವೆ. ಅದರ ಬಗ್ಗೆ ತಾವು ಇನ್ನು ಮುಂದಕ್ಕೆ ಅದೇ ವಿಚಾರವನ್ನು ಮಾತನಾಡತಕ್ಕಂಥದ್ದು ಸೂಕ್ತವಲ್ಲವೆಂದೆನಿಸುತ್ತದೆ.

ಅಧ್ಯಕ್ಷರು:– ಶೆಟ್ಟಿಯವರೆ, ಈಗ ಅವರೊಂದು principle ಅನ್ನು accept ಮಾಡಿ ಒಂದು Committee ಮಾಡಿದ್ದಾರೆ. ನಾವು ಶಾಸಕರು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಯಾವ್ಯಾವ survey number, ಯಾವ ಪ್ರದೇಶದಲ್ಲಿ ಸಮಸ್ಯೆ ಇದೆ ಎಂಬ ಬಗ್ಗೆ representation ಕೊಡುವಂಥ ಕೆಲಸ ಮಾಡೋಣ.

ಶ್ರೀ ಬಿ. ರಮಾನಾಥ ರೈ:– ನಾವು ಅಲ್ಲಿ ಸ್ಥಳೀಯವಾಗಿ ಚುನಾಯಿತ ಜನಪ್ರತಿನಿಧಿಗಳನ್ನು ….

(ಗೊಂದಲ)

ಅಧ್ಯಕ್ಷರು:– ಆಯಿತು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವಾಗ ಸಮಿತಿಯವರು ಬರುತ್ತಾರೆಂದು ಒಂದು ದಿವಸದ ಮುಂಚೆ ಹೇಳುತ್ತಾರೆ. PWD ಯಿಂದ, ಒಂದು proposal ಅನ್ನು ಮಧ್ಯಾಹ್ನ 12

ಗಂಟೆಯೊಳಗಡೆ ಕೊಡಿ ಎಂದು ನಮಗೆ ಬರುತ್ತದೆ. ಆದರೆ, ಯಾವಾಗ ಬರುತ್ತಾರೆ? ನಾವೂ ಸ್ವಲ್ಪ ಬಿಡುವು ಮಾಡಿಕೊಳ್ಳಬೇಕು.

ಅಧ್ಯಕ್ಷರು:– ಆಯಿತು, publicity ಕೊಡಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಗೊತ್ತಾಗದಿದ್ದರೆ ಇನ್ನೊಂದು ಸಲ....

ಅಧ್ಯಕ್ಷರು:– ಆಯಿತು. ಮಂತ್ರಿಗಳೇ ಹೇಳಿ. Publicity ಕೊಟ್ಟು ಯಾರ್‍ಯಾರ ಅಭಿಪ್ರಾಯ ಏನೇನಿದೆ ಕೇಳಿ?

ಶ್ರೀ ವಿ. ಸುನೀಲ್‌ಕುಮಾರ್:– Public hearing ಕೊಡುತ್ತೇವೆಂದು ಹೇಳಿಬಿಡಿ ಸಾರ್.

ಶ್ರೀ ಬಿ. ರಮಾನಾಥ ರೈ:– ಸಾರ್ವಜನಿಕ ಉದ್ದೇಶಕ್ಕಾಗಿ ಕಾಡು, ಈಗೇನಾಗಿದೆ ಎಂದರೆ, ಸಾಮಾನ್ಯವಾಗಿ ಈಗ ಈ ಬಗರ್‌ಹುಕುಂ ಸಾಗುವಳಿ ಬಂದನಂತರ ಸಾಕಷ್ಟು ಕಂದಾಯ ಇಲಾಖೆಗಳಿಗೆ ಸೇರಿದ ಭೂಮಿ ಜನರ ಕೈ ಸೇರಿದೆ. ಸಾರ್ವಜನಿಕ ಉದ್ದೇಶಕ್ಕಾಗಿ. .. .

ಅಧ್ಯಕ್ಷರು:– Forest ಹೋಗಿಲ್ಲ. ಕಂದಾಯ ಇಲಾಖೆಯದ್ದು ಎಷ್ಟು ಹೋಗಿದೆ ನೋಡೋಣ.

ಶ್ರೀ ಬಿ. ರಮಾನಾಥ ರೈ:– ಸಾಮಾನ್ಯವಾಗಿ ಕಾಡಿನ ಪ್ರದೇಶಗಳ ಮೇಲೆ ಒತ್ತಡಗಳು ಖಂಡಿತವಾಗಿ ಇವೆ.

ಅಧ್ಯಕ್ಷರು:– ಸ್ವಾತಂತ್ರ್ಯ ಬಂದಾಗ ಜನಸಂಖ್ಯೆ ದೇಶದಲ್ಲಿ 36 ಕೋಟಿ ಇತ್ತು.

ಶ್ರೀ ಬಿ. ರಮಾನಾಥ ರೈ:– ಈಗ ಜನಸಂಖ್ಯೆ ಬಹಳಷ್ಟು ಜಾಸ್ತಿಯಾಗಿದೆ.

ಅಧ್ಯಕ್ಷರು:– ಈಗ ಏಕೆ ಜನಸಂಖ್ಯೆ ಜಾಸ್ತಿ ಮಾಡಿದಿರಿ? ಈ supreme Court, ಇವರ ಮಾತುಗಳನ್ನು ಕಟ್ಟಿಕೊಳ್ಳಬೇಡಿ. ಜನ ಪ್ರತಿನಿಧಿಗಳು ಜನರ ರಕ್ಷಣೆಗೆ ಏನು ಬೇಕೋ ಅದನ್ನು ಮಾಡಿ.

ಶ್ರೀ ಬಿ. ರಮಾನಾಥ ರೈ:– supreme Court ಗೆ affidavit ಹಾಕುವ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು:– ಅದು ಮಾಡಿ, ಸಾಕು. ತಿಳಿದುಕೊಳ್ಳಿ, ಈಗ Supreme Court ಏನು ಹೇಳುತ್ತದೋ, ಏಕೆ ಹೇಳುತ್ತದೋ ನನಗೆ ಗೊತ್ತಿಲ್ಲ. Forest Act ಎಂದು ಒಂದು ಇದೆ. ಆ Forest Act ಎಂದು ಹೇಳುವುದಕ್ಕೆ ಒಂದು notification issue ಮಾಡಿದರೆ ಮಾತ್ರ forest. Notification ಎಲ್ಲಿ, ಯಾವಾಗ ಮಾಡಿದ್ದೀರಿ? ಅದಕ್ಕೆ ನಾವು ಸ್ವಲ್ಪ ಜನರ ಮಧ್ಯದ ಸಮಸ್ಯೆ ನೋಡಿ ಪರಿಹರಿಸಬೇಕು ಮತ್ತು forest ಉಳಿಯಬೇಕು, ನಾನು ಇಲ್ಲ ಎಂದು ಹೇಳುವುದಿಲ್ಲ. ರಕ್ಷಣೆ ಮಾಡಿ. ನೀವು ಬೇಕಾದರೆ ಬನ್ನಿ. ಹುಲಿಕಲ್ ಘಾಟ್‌ಗೆ ಹೋಗಿ. ಅಲ್ಲಿ forest ಉಳಿದಿದೆಯೋ ಇಲ್ಲವೋ? ಅಲ್ಲಿಗೆ ಯಾರಾದರೂ ನುಗ್ಗಿದ್ದಾರೆಯೇ? ಇಲ್ಲ. ಆದ್ದರಿಂದ, ಇದನ್ನು ಸ್ವಲ್ಪ ಬಿಚ್ಚು ಮನಸ್ಸಿನಿಂದ ಕುಳಿತುಕೊಂಡು ಆಲೋಚನೆ ಮಾಡಿ.

ಶ್ರೀ ಬಿ. ರಮಾನಾಥ ರೈ:– ತಮ್ಮ ಮಾತಿಗೆ ನಾನು ಜೋರು ಕೂಡ ಮಾತನಾಡುವುದಿಲ್ಲ. ನಮ್ಮ ಉದ್ದೇಶ ಏನು ಎನ್ನುವುದನ್ನು ಹೇಳಿದ್ದೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ತಾವು ಒಂದು ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಅಧ್ಯಕ್ಷತೆಯಲ್ಲಿಯೇ ಒಂದು ಸಭೆ ಕರೆಯಿರಿ.

ಅಧ್ಯಕ್ಷರು:– ಮಾಡೋಣ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅಧಿಕಾರಿಗಳು, ಮಂತ್ರಿಗಳು, ನಾವು ಆ ಭಾಗದ ಶಾಸಕರುಗಳು ತಮ್ಮ ಅಧ್ಯಕ್ಷತೆಯಲ್ಲಿ meeting ಮಾಡಿ ನಿರ್ಧಾರ ತೆಗೆದುಕೊಳ್ಳೋಣ. ಅವರನ್ನು ಬಿಟ್ಟು ಮಾಡಿದರೆ ಪುನಃ ತೊಂದರೆ ಆಗುತ್ತದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಸಾಧಕ ಬಾಧಕಗಳ ಬಗ್ಗೆ ಇನ್ನೊಮ್ಮೆ ಚರ್ಚೆ ಮಾಡುವ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಇನ್ನೊಂದು ಮುಖ್ಯವಾಗಿರತಕ್ಕಂಥ ವಿಚಾರವೇನೆಂದರೆ, ಅರಣ್ಯ ಪ್ರದೇಶವನ್ನು ಸರ್ಕಾರದ ಯೋಜನೆಗಳಿಗೆ ಅರಣ್ಯ ಪ್ರದೇಶವನ್ನು ಕೊಡುವಾಗ ಅಲ್ಲಿ ಸ್ವಲ್ಪ ಜಾಗವನ್ನು ಕೊಡಲಿಕ್ಕೆ ತುಂಬಾ ಕಷ್ಟವಾಗುತ್ತದೆ ಎನ್ನುವ ಮಾತನ್ನು ತಾವು ಹೇಳಿದಿರಿ. F.C. Act ನ ಅಡಿಯಲ್ಲಿ ಬಹುಶಃ ಅದಕ್ಕೆ procedures ಇದೆ.

ಅಧ್ಯಕ್ಷರು:– ಈಗ ಇದು ಮಾಡಿದ್ದಾರೆ ನಾನು ನೋಡಿದ್ದೇನೆ. ನಮ್ಮಲ್ಲಿ N.H. ಕಡೆಯಿಂದ ಒಂದು bridge ಆಗಿದೆ. ಅಲ್ಲಿ 3 ಎಕರೆ, 4 ಎಕರೆ ಜಾಗ ಸೇರಿಕೊಂಡುಬಿಟ್ಟಿದೆ. ಅದರಲ್ಲಿ ಎಂಥದ್ದೂ ಇಲ್ಲ. 4–5 ನೀಲಗಿರಿ ಮರ ಇದೆ. ಈಗ ಲಿಂಗನಮಕ್ಕಿ ಡ್ಯಾಂ ಎಲ್ಲ ಕಟ್ಟಿದ್ದೇವಲ್ಲ. ಅಲ್ಲಿ ಬಹಳಷ್ಟು ಅರಣ್ಯ ಪ್ರದೇಶ ಮುಳುಗಡೆಯಾದವಲ್ಲ. ಇದೇ philosophy ಆವತ್ತು ಇಟ್ಟುಕೊಂಡಿದ್ದರೆ ಈ ಡ್ಯಾಂ ಕಟ್ಟುವುದಕ್ಕೆ ಆಗುತ್ತಿತ್ತೇ?

ಶ್ರೀ ಬಿ. ರಮಾನಾಥ ರೈ:– ಹೌದು ಸರ್.

ಅಧ್ಯಕ್ಷರು:– ಆಯಿತು ಬಿಡಿ. ರಾಜ್ಯದ ಹಿತದೃಷ್ಟಿಯಿಂದ ರಾಜ್ಯದಲ್ಲಿ ಕೆಲವು ಅನಿವಾರ್ಯವಾಗಿ ಮಾಡಿ. ನಾವು ಜನರ ಪ್ರತಿನಿಧಿ. ಜನರ ಹಿತ ಮೊದಲು ಮುಖ್ಯ. ಜೊತೆಗೆ ಈ ಅರಣ್ಯ ಪರಿಸರವನ್ನು ಉಳಿಸಿಕೊಳ್ಳಲೇಬೇಕು, ಅದರಲ್ಲಿ ಬೇರೆ ಮಾತೇ ಇಲ್ಲ. ಅವೆರಡನ್ನೂ ಸಮನ್ವಯಗೊಳಿಸಿ ಮಾಡಬೇಕೇ

ವಿನಃ ಬರೀ ಕುದುರೆಗೆ ಜಿಪ್ ಹಾಕಿ ಕೊಂಡು ಹೋದಂತೆ ಹೋದರೆ ಆಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ:- ನಾವು ವಿಶಾಲ ದೃಷ್ಟಿಯಲ್ಲಿ ಇದ್ದೇವೆ. ಅದಕ್ಕೆ ನಾವು ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕವಾದ ಒಂದು ಸಮಿತಿಯನ್ನು ಮಾಡಿ ಶರಾವತಿ ಮುಳುಗಡೆ ಪ್ರದೇಶದ ಜನರಿಗೆ ಏನು ತೊಂದರೆಯಾಗಿದೆ, ಏಕೆಂದರೆ ಅವರು ಸದುದ್ದೇಶಕ್ಕಾಗಿ ತಮ್ಮ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ. ಅವರನ್ನು ಬೇರೆ ಕಡೆಗೆ ವರ್ಗಾಯಿಸಿ ಅಲ್ಲಿ ಅವರಿಗೆ ಒಂದು ಜಾಗ ಕೊಟ್ಟಿದ್ದಾರೆ. ಆ ಜಾಗವನ್ನು ಈಗ forest ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಶರಾವತಿಯಿಂದ ಮುಳುಗಡೆಯಾದಂಥ ಪ್ರದೇಶದ ಜನರಿಗೆ ಕೊಟ್ಟಂಥ ಜಾಗ ಏನು ಸಮಸ್ಯೆಯಲ್ಲಿದೆ, ಅವರಿಗೂ ಕೂಡ ಪರಿಹಾರ ಮಾಡುವ ದೃಷ್ಟಿಯಲ್ಲಿ ನಾವು ಈಗಾಗಲೇ ಅದನ್ನು de-notify ಮಾಡತಕ್ಕಂಥ ದೃಷ್ಟಿಯಲ್ಲಿ ಕೂಡ ನಾವು ಚಿಂತನೆ ಮಾಡುತ್ತೇವೆ.

ಅಧ್ಯಕ್ಷರು:- ಇದೆಲ್ಲ notify ಆಗಿಹೋಗಿದೆ. ಅದನ್ನು Revenue ರವರು entry ಮಾಡಿಕೊಳ್ಳಲಿಲ್ಲ.

ಶ್ರೀ ಬಿ. ರಮಾನಾಥ ರೈ:- ಕೆಲವು ಕಡೆ ಏನಾಗಿದೆ ಎಂದರೆ survey number ಒಂದು ಇದ್ದರೆ ಅವರು ಇರತಕ್ಕಂಥದ್ದು ಇನ್ನೊಂದು ಆಗಿದೆ.

ಅಧ್ಯಕ್ಷರು:- ಹೌದು, ನಿಜ. ಆಗಿದೆ. ಅದನ್ನು ಮಾಡಿ.

ಶ್ರೀ ಬಿ. ರಮಾನಾಥ ರೈ:- ಹಾಗಾಗಿ ಅದನ್ನು ಕೂಲಂಕಷವಾಗಿ ತನಿಖೆ ಮಾಡಬೇಕಾಗಿದೆ. ಯಾರಿಗೆ ತೊಂದರೆಯಾಗಿದೆ ಅದನ್ನು ಸರಿಪಡಿಸತಕ್ಕಂಥ ರೀತಿಯಲ್ಲಿ, ನಾಳೆ ಅವರಿಗೆ ಅದು ಸಮಸ್ಯೆ ಆಗಬಾರದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಮಂತ್ರಿಯವರೆ, ಕೊಡಗಿನಲ್ಲಿ ಹಾರಂಗಿ ಡ್ಯಾಂ ಕಟ್ಟಿರುವುದು 1972ರಲ್ಲಿ. ಅಲ್ಲಿ ವಾಸ ಮಾಡುತ್ತಿದ್ದ ಜನರಿಗೆ ಬೇರೆ ಕಡೆ ಜಾಗ ಕೊಟ್ಟಿದ್ದರೂ ಕೂಡ ಅವರಿಗೂ ಇವತ್ತಿನ ವರೆಗೂ ಕೂಡ

ಯಾವುದೇ ದಾಖಲಾತಿಯನ್ನು ಕೊಡಲಿಲ್ಲ. ಅದರಿಂದಾಗಿ ಅವರು ಸಾಲ ಸಹ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅವರಿಗೆ ಮುಂದಿನ ದಿವಸಗಳಲ್ಲಿ ತೊಂದರೆಯಾಗಬಾರದು. ಏಕೆಂದರೆ, ಅವರು ಒಂದು ಜಾಗದಲ್ಲಿ ಕುಳಿತಿದ್ದಾರೆ. ಅವರ survey number ಬೇರೆ ಇದೆ. ಅವರಿಗೆ ಕೊಟ್ಟಿರತಕ್ಕಂಥ survey number ಇನ್ನೊಂದು ಇರಬಹುದು. ಅದನ್ನೆಲ್ಲ ಸರಿಪಡಿಸಲು ಅಧಿಕಾರಿಗಳ ಮಟ್ಟದ ಒಂದು ಸಮಿತಿಯನ್ನು ಮಾಡಿ ಆ ಒಂದು ಶರಾವತಿ ಮುಳುಗಡೆ ಪ್ರದೇಶದ ಜಾಗದ ತೀರ್ಮಾನ ಮಾಡಲಿಕ್ಕೆ ನಾವು ಒಂದು ವ್ಯವಸ್ಥೆ ಮಾಡುತ್ತೇವೆ. ಅದಕ್ಕಾಗಿ ಒಂದು ಪ್ರತ್ಯೇಕವಾದ wing ಅನ್ನು ಮಾಡುತ್ತೇವೆ. ಶರಾವತಿ ಮುಳುಗಡೆ ಪ್ರದೇಶದ ಜನರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಒಂದು ಪ್ರತ್ಯೇಕವಾದ wing ಮಾಡಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ:– CCF-Land Recordsರವರನ್ನು ಬಿಟ್ಟು ಮಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– 1980ರಿಂದ ಇಲ್ಲಿಯವರೆಗೆ ನಾವು 602 ಪ್ರಕರಣಗಳಲ್ಲಿ 28,618 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಇರತ ಉದ್ದೇಶಗಳಿಗೆ ಕೊಟ್ಟಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– 2010ನೇ ಇಸವಿಯಿಂದ ಈ ರೀತಿ forestಅನ್ನು ಬಿಟ್ಟು alternate land ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಿ ನೋಡೋಣ. ಒಂದೂ ಕೊಟ್ಟಿಲ್ಲ ಮಾನ್ಯ ಅಧ್ಯಕ್ಷರೆ. 1993ರಲ್ಲಿ ನಮ್ಮಲ್ಲಿ ಕುಟಿಯಾಲ ಎಂಬಲ್ಲಿ ಒಂದು 600 ಮೀಟರ್ ಸೇತುವೆ ಕಟ್ಟಿ ರಸ್ತೆಯನ್ನೂ ಮಾಡಿಬಿಟ್ಟಿದ್ದಾರೆ. Borders ಹಾಕಿ ಮಾಡುವುದಕ್ಕೆ ಇವರು ಬಿಡುವುದಿಲ್ಲ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ:- ಮಾನ್ಯ ಮಂತ್ರಿಗಳೇ, ನನ್ನ ತಾಲ್ಲೂಕಿನಲ್ಲಿ Land Bankಗೆ Revenue Departmentನಿಂದ land ಕೊಟ್ಟಿದ್ದಾರೆ. ಹೇಮಾವತಿಯಿಂದ ಒಂದುನೂರು ಕೆರೆ ತುಂಬುವಂತಹ ಒಂದು ಕಾಲುವೆ ಹೋಗುತ್ತಿದೆ. ನಾಲ್ಕೈದು ವರ್ಷಗಳಿಂದ D.C., ನಾವು, ಎಲ್ಲರೂ ನಿಮ್ಮ ಅಧಿಕಾರಿಗಳನ್ನು ಪರಿಪರಿಯಾಗಿ request ಮಾಡುತ್ತಿದ್ದೇವೆ. Land Bankನಲ್ಲಿ ನಾವು clear ಮಾಡುತ್ತೇವೆ. ಅಲ್ಲಿ Nursery ಇಲ್ಲ, Forest ಇಲ್ಲ, ಅದು ಖಾಲಿ land ಆಗಿದ್ದು, ಒಂದು ಕಾಲುವೆ ಹೋಗುವುದಕ್ಕೆ ಅದನ್ನು ಬಿಟ್ಟು ಕೊಡಿ, ಮುಂದಿನ ನೂರು ಕೆರೆ ತುಂಬುವುದರಿಂದ ಕುಡಿಯುವ ನೀರಿಗೆ ಅನುಕೂಲವಾಗುತ್ತದೆಂದು ಕೇಳಿಕೊಂಡೆವು. ನಮ್ಮ ಅಧಿಕಾರಿಗಳಿಗೆ ಮನುಷ್ಯತ್ವವೇ ಇಲ್ಲವಲ್ಲ ಸ್ವಾಮಿ. ದಯಮಾಡಿ ನಿಮ್ಮ ಅಧಿಕಾರಿಗಳಿಗೆ ಇಂತಹವುಗಳನ್ನು ಮಾಡುವುದಕ್ಕೆ ಹೇಳಿ. ಕುದುರೆಗೆ ಮುಖವಾಡ ಹಾಕಿದಂತೆ ಇರುವುದು ಬೇಡ. ಇಂತಹವುಗಳನ್ನು ಮಾಡುವಂತೆ ಹೇಳಿ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ಅರಣ್ಯ ಸಂರಕ್ಷಣೆ ಕಾಯಿದೆಯಡಿ ಭೂಮಿಯನ್ನು ಅರಣ್ಯೇತರ ಕಾರಣಗಳಿಗೆ ಕೊಡಬೇಕೆಂದರೆ ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ಅನೇಕ ಷರತ್ತುಗಳಿವೆ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:- ಅನುಮತಿ ಬೇಕಿಲ್ಲ. ಅದು ಆ forest ಅಲ್ಲ. ಅದು state forest ಆದ್ದರಿಂದ ನಿಮ್ಮ ಸರ್ಕಾರದಲ್ಲೇ ತೆಗೆದುಕೊಳ್ಳಬಹುದು ಎಂದು ಹೇಳಿದರು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:- C & D class ಸಮಸ್ಯೆ ಪರಿಹಾರವಾಗುತ್ತದೆಯಲ್ಲ. ನಾನು ಈಗಾಗಲೇ ಚರ್ಚೆ ಮಾಡಿದಾಗ ವಿಚಾರ ಹೇಳಿದ್ದೇನಲ್ಲ.

(ಗೊಂದಲ)

ಅಧ್ಯಕ್ಷರು:– ಚೆಲುವರಾಯಸ್ವಾಮಿಯವರೇ, ಆ Forest Conservation Act ಬಂತಲ್ಲ, ಆದರಿಂದ ಈ ಎಲ್ಲಾ ಸಮಸ್ಯೆಗಳು ಹುಟ್ಟಿಕೊಂಡಿವೆ. ಆಗ Parliamentಗೆ ನಮ್ಮ ರಾಜ್ಯದಿಂದ ಹೋದ ಸದಸ್ಯರು ನಿದ್ದೆ ಹೊಡೆದರು. Bill pass ಆಯಿತು.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ:– ಆದರೂ ಮಾನ್ಯ ಅಧ್ಯಕ್ಷರೆ, ಇವರು ಮನಸ್ಸು ಮಾಡಿದರೆ ಇವಕ್ಕೆಲ್ಲ ಕಡಿವಾಣ ಹಾಕಬಹುದು.

(ಗೊಂದಲ)

ಅಧ್ಯಕ್ಷರು:– ನೀವು ಸುಮ್ಮನಿರಿ. ಈಗ ಕೆರೆ ಮತ್ತು ಅಚ್ಚುಕಟ್ಟಿಗೆ ಸಂಬಂಧಿಸಿದಂತೆ ಒಂದು ಕಾನೂನು ತರುತ್ತಿದ್ದಾರೆ. ಅದರ ಬಗ್ಗೆ ಇಲ್ಲಿ ಎಷ್ಟು ಚರ್ಚೆಯಾಯಿತು, ಎಷ್ಟು ಜನ ಸದಸ್ಯರು ಮಾತನಾಡಿದರು? Forest Conservation Act Parliamentನಲ್ಲಿ ಚರ್ಚೆಗೆ ಬಂದಾಗ ಎಷ್ಟು ಚರ್ಚೆಯಾಗಿದೆ ಎಂಬುದನ್ನು ಕುಮಾರಸ್ವಾಮಿಯವರೇ ನೀವು ತೆಗೆದು ನೋಡಿ.

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಆ ಭಾಗದ ಸದಸ್ಯರಾದ ನಾವು ಈ ಬಗ್ಗೆ ಬಹಳಷ್ಟು ಜನರ ಗಮನಕ್ಕೆ ತಂದಿದ್ದೇವೆ.

(ಗೊಂದಲ)

ಅಧ್ಯಕ್ಷರು:– ನಿಮ್ಮಲ್ಲಿಂದ ಹೋದವರು ಇದ್ದಾರಲ್ಲ ಅವರು ತಿರುಗುತ್ತಾರೆ.

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಇವರು ಸ್ವಲ್ಪವಾದರೂ ಪ್ರಯತ್ನ ಮಾಡುತ್ತಾರೆಂದು ನಾನು ಹೇಳಿದೆ.

(ಗೊಂದಲ)

ಅಧ್ಯಕ್ಷರು:– ತಾವು ಸುಮ್ಮನಿರಿ. ಅದು ಹಾಗಲ್ಲ. ಅವರು ಯಾವ ಪ್ರದೇಶದಿಂದ ಆಯ್ಕೆಯಾಗಿ ಹೋಗಿರುತ್ತಾರೋ ಆ ಪ್ರದೇಶದ ಜನರ ಹಿತಾಸಕ್ತಿಯನ್ನು ಕಾಪಾಡುವಂತಹ ಇಚ್ಛಾ ಶಕ್ತಿ ಇರಬೇಕು. ಸುಮ್ಮನೆ Parliamentಗೆ ಹೋಗಿ ಕುಳಿತುಬಿಟ್ಟರೆ ಅಯಿತೇ?

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಅವರಿಗೆ ಹೇಳಿದ್ದಲ್ಲ. ಹಿಂದೆ ನಮ್ಮ ರಾಜ್ಯ ಸರ್ಕಾರ . . .

(ಗೊಂದಲ)

ಅಧ್ಯಕ್ಷರು:– ಇದು ಬಂದಿರುವುದು ನಮ್ಮ ಗ್ರಹಚಾರ.

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ನಾನು ಕೇಂದ್ರದ್ದನ್ನು ಹೇಳುತ್ತಿಲ್ಲ. ರಾಜ್ಯ ಸರ್ಕಾರದ ಗಮನಕ್ಕೆ ಬಹಳಷ್ಟು ಸಲ ತಂದಿದ್ದೇನೆ. ಈ ಮಂತ್ರಿಗಳು ಸ್ವಲ್ಪ ಕಿವಿಗೊಟ್ಟು ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಅವರು ಈ ಅರಣ್ಯ ಇಲಾಖೆಯೇ ಒಂದು ಸರ್ಕಾರ ಎಂದು ತಿಳಿದುಕೊಂಡಿದ್ದಾರೆ. ಮೊನ್ನೆ ಯಾವುದೋ ಒಂದು ಪ್ರಶ್ನೆ ಬಂತು ರೀ ಮಹಾರಾಯರೆ. ಇನ್ನೊಂದು ಇಲಾಖೆಗೆ ಜಮೀನು ಕೊಡಬೇಕು ಎಂದರೆ ` 10 ಕೋಟಿ, ` 20 ಕೋಟಿ ಕೊಡಬೇಕೆಂದು ಹೇಳುತ್ತಾರೆ. ಹೀಗಾದರೆ ಇದರ ಕಥೆ ಏನು? ಇದು ಯಾವ ಸರ್ಕಾರ? ಇವರು ಹೇಳುತ್ತಾರೆಂದು ಹಾಗೆ

ಹೋಗಬೇಡಿ. Once Government is formed, ಅದರಲ್ಲಿ ಇದೊಂದು different department. ಆ concept ಅನ್ನು ಇಟ್ಟುಕೊಳ್ಳಬೇಕು. ಆ ರೀತಿ ಮಾಡಬೇಕು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಮಾನ್ಯ ಅಧ್ಯಕ್ಷರೆ.

ಅಧ್ಯಕರು:– very good. ಮಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾನು ಹೇಳಿರತಕ್ಕಂಥದ್ದು ಏನೆಂದರೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯವರು ಷರತ್ತುಗಳನ್ನು ಹಾಕಿದ್ದಾರೆ.

ಅಧ್ಯಕ್ಷರು:– ಹೌದು. ಅದನ್ನು ಮಾಡಿದ್ದಾರೆ.

ಶ್ರೀ ಬಿ. ರಮಾನಾಥ ರೈ:– ಅದಕ್ಕನುಗುಣವಾಗಿ ನಾವು FC Actನಲ್ಲಿ ಪ್ರಸ್ತಾವನೆಯನ್ನು ಮಾಡಬೇಕಾಗಿದೆ. ಆ ಪ್ರಸ್ತಾವನೆ fulfill ಆದ ಮೇಲೆ ಇದನ್ನು ಮಾಡುತ್ತೇವೆ. State forest ಇರಬಹುದು, ಅದೂ ಸಹ Forest Conservation Act ನಡಿಯಲ್ಲಿ ಬರುವುದರಿಂದ ಸಮಸ್ಯೆಗಳಿವೆ. ಆದರೆ ಯಾವುದೇ ಕ್ರಮವನ್ನು ಮಾಡಬೇಕಾದರೂ ಸಹ ಕಾನೂನಿನ ಚೌಕಟ್ಟಿನೊಳಗೇ ಮಾಡಬೇಕಾಗುತ್ತದೆ. ಆದ್ದರಿಂದ ಅದನ್ನು ಹೇಗೆ ಮಾಡಬೇಕೆಂದು ನೋಡಿ ಮಾಡುತ್ತೇವೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ 1996–97ರಲ್ಲಿ 14 ಸಾವಿರ ಹೆಕ್ಟೇರ್ ಭೂಮಿಯನ್ನು ಯಾರು ಅರಣ್ಯದಲ್ಲಿ ಮೂರು ತಲೆಮಾರುಗಳಿಂದ ಕೃಷಿ ಮಾಡಿಕೊಂಡಿದ್ದರೋ ಅವರಿಗೇ ಬಿಟ್ಟುಕೊಡುವುದಕ್ಕೆ ಅದೇಶವಾಗಿದೆ. ಈವರೆಗೆ

4,000 ಹೆಕ್ಟೇರ್ ಮಾತ್ರ ಬಿಟ್ಟುಕೊಡಲಾಗಿದ್ದು ಇನ್ನೂ 10,000 ಹೆಕ್ಟೇರ್ ಮಾಡಬೇಕಾದ್ದು ಬಾಕಿ ಇದೆ. ಅದರಡಿಯಲ್ಲಿ ಇವರು ಸಹಾಯ ಮಾಡಬಹುದು.

ಅಧ್ಯಕ್ಷರು:– ಮಾಡಿ ಮಾಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಇನ್ನೊಂದು ಮುಖ್ಯವಾಗಿ ಅರಣ್ಯೀಕರಣ ಮಾಡುವುದು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲವೆಂದು ಸಹ ಬಹಳಷ್ಟು ಸದಸ್ಯರು ಚರ್ಚೆಯಲ್ಲಿ ಹೇಳಿದ್ದಾರೆ. ಅದು ಗಿಡ ನೆಡುವಂತಹ ಕಾರ್ಯಕ್ರಮ. ಈ ಇಲಾಖೆಯಲ್ಲಿ ಅದೆಷ್ಟೋ ಹಿರಿಯ ಸದಸ್ಯರು ಸಚಿವರಾಗಿ ಕೆಲಸ ಮಾಡಿದ್ದಾರೆ. ಆ ಕಾಲದಿಂದ ಕೆ.ಹೆಚ್. ಪಾಟೀಲ್‌ರವರು, ರಂಗನಾಥ್‌ರವರು, ರಾಚಯ್ಯನವರಿರಬಹುದು, ಅನೇಕ ಜನ ಕೆಲಸ ಮಾಡಿಕೊಂಡು ಬಂದಿರತಕ್ಕಂಥ ಒಂದು ದೊಡ್ಡ ಇಲಾಖೆಯಾಗಿದೆ. ಆ ಕಾಲದಲ್ಲಿ ಅರಣ್ಯದ ಪರಿಕಲ್ಪನೆ ಬೇರೆ ಇತ್ತು. ಈಗ ಅರಣ್ಯದ ಪರಿಕಲ್ಪನೆ ಬೇರೆ ರೀತಿ ಇದೆ. ತಾವೇನು ಹೇಳಿದ್ದೀರಿ ಅದಕ್ಕೆ ಸಂಬಂಧಿಸಿದಂತೆ ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ. ಅರಣ್ಯೀಕರಣ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಹಲವಾರು ಆಕ್ಷೇಪಣೆಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಎಷ್ಟು ಗಿಡಗಳು ಬದುಕುಳಿದಿವೆ ಎಂಬ ಬಗ್ಗೆ ಸ್ವತಂತ್ರ ಸಂಸ್ಥೆಯಿಂದ ಒಂದು ಮೌಲ್ಯಮಾಪನ ಮಾಡಲು ನಾವು ತೀರ್ಮಾನಿಸಿದ್ದೇವೆ. ಅದನ್ನು ನಾವು ಮಾಡುತ್ತೇವೆ. ಬಹಳಷ್ಟು ವರ್ಷಗಳಿಂದ ಈ ಗಿಡ ನೆಡುವ ಕಾರ್ಯಕ್ರಮ ನಡೆದುಕೊಂಡು ಬಂದಿದೆ. ಇದರಲ್ಲಿ ಲೋಪದೋಷಗಳಿವೆ ಎಂದು ನನ್ನ ಗಮನಕ್ಕೆ ತಂದಿದ್ದೀರಿ. ಈ ಬಗ್ಗೆ ಒಂದು ಸ್ವತಂತ್ರ ಸಂಸ್ಥೆಯಿಂದ ಮೌಲ್ಯಮಾಪನ ಮಾಡಲು ನಾವು ತೀರ್ಮಾನಿಸಿದ್ದೇವೆ. ಕೊಡುಗು ವೃತ್ತದ ಬಾಗಮಂಡಲದ ಸಂಪಾಜೆ ಮತ್ತು ತಣ್ಣಿಮಾಣಿ ಎಂಬ ಜಾಗದಲ್ಲಿ ಹರಳುಕಲ್ಲು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿ ಹೊಂಡಗಳನ್ನು ಮುಚ್ಚುವ ಪ್ರಯತ್ನ ಮಾಡುತ್ತೇವೆ. ಹರಳುಕಲ್ಲು ಗಣಿಗಾರಿಕೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವ ಪ್ರಯತ್ನವನ್ನು

ನಾವು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದು ಗಡಿ ಭಾಗ ಎಂದು ನನಗೆ ಗೊತ್ತಿದೆ. ಇವು ನಮಗೆ ಗೊತ್ತಿರತಕ್ಕಂಥ ಸಮಸ್ಯೆಗಳು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಕಾಡು ಬೆಳೆಸುವ ಬಗ್ಗೆ ಬಹಳಷ್ಟು ಜನ ಶಾಸಕರು ಮತ್ತು ಮಾಜಿ ಸಚಿವರು ಹೇಳಿದರು. ಅಕೇಶಿಯ ಮತ್ತು ಕೆಸೊರಿನಾ (ಗಾಳಿಮರ) ಮರಗಳು ಬಹಳಷ್ಟು ನೀರನ್ನು ಹೀರುತ್ತವೆ. ನಾನು ಕೆಲವು ವರ್ಷಗಳಿಂದ ಹೇಳಬೇಕೆಂದಿದ್ದೆ. ನಮ್ಮ ಭಾಗದಲ್ಲಿ ಶೀಘ್ರದಲ್ಲಿ ಬೆಳೆಯುವಂಥದ್ದು ಅಕೆಶಿಯ ಮತ್ತು ಕೆಸೊರಿನಾ ಮರಗಳು. ಅವು ಬಂದ ಮೇಲೆ ನಮ್ಮ ಭಾಗದಲ್ಲಿ ಬಡವರ ಮನೆಯಲ್ಲಿ ಉರುವಲು ಕಟ್ಟಿಗೆ ಸಮಸ್ಯೆ ಬಹಳಷ್ಟು ಪರಿಹಾರವಾಯಿತು. ಅವು ಇಲ್ಲದಿದ್ದರೆ ಒಳ್ಳೆಯ ಜಾತಿಯ ಮರಗಳನ್ನು ಕಡಿಯುತ್ತಿದ್ದರು. ಆದ್ದರಿಂದ ಅದನ್ನು ಏಕೆ ಬೆಳೆಯಬಾರದು ಎಂಬ ಬಗ್ಗೆ ತಾವು ಇನ್ನೊಮ್ಮೆ ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ.

(ಗೊಂದಲ)

ಅಧ್ಯಕ್ಷರು:– ಅವರ ಕಡೆ ಹಾಕಿ. ನಮ್ಮ ಕಡೆ ಹಾಕಬೇಡಿ.

(ಗೊಂದಲ)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ನಮ್ಮ ಕಡೆ ಹಾಕಲಿ. ನಮಗೆ ಪರಿಹಾರ ಬೇಕಲ್ಲ. ಪರ್ಯಾಯ ವ್ಯವಸ್ಥೆ ಬೇಕಲ್ಲ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಅರಣ್ಯ ಸಮಿತಿಯಲ್ಲೂ ಸಹ ಈ ಬಗ್ಗೆ ಚರ್ಚೆಯಾಗಿದೆ. ಉರುವಲಿಗಾಗಿ ಇವುಗಳನ್ನು ಬೆಳೆಸುವ ಪ್ರಯತ್ನ ಕೆಲವುಕಡೆಗಳಲ್ಲಿ ಆಗುತ್ತಿದೆ. ಇದರಿಂದ ತೊಂದರೆಯಾಗುತ್ತದೆಂಬ ವಿಚಾರವನ್ನು ತಾವು ಹಾಗೂ ಅನೇಕ ಸದಸ್ಯರು ನನ್ನ ಗಮನಕ್ಕೆ ತಂದಿದ್ದೀರಿ. ಇದಕ್ಕೆ ಪ್ರೋತ್ಸಾಹವನ್ನು ನಾವು ಸಾಕಷ್ಟು ಕಡಿಮೆ ಮಾಡುತ್ತೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ನಮ್ಮ ಕಡೆ ಆ ರೀತಿ ಇಲ್ಲ. ಮಾನ್ಯ ಸಚಿವರು ಉಲ್ಟಾ ಹೇಳಿದರು. ಒಂದೇ ನಿಮಿಷ ಅಧ್ಯಕ್ಷರೆ.

(ಗೊಂದಲ)

ಅಧ್ಯಕ್ಷರು:– ಶೆಟ್ಟರೆ, ಚರ್ಚೆ ಸಾಕು. Reply ಆನಂತರ ಕೇಳಿ. ಮಧ್ಯೆ ಪ್ರವೇಶ ಮಾಡಬೇಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರ ಸಹೋದರಿಯಾದ ಶ್ರೀಮತಿ ನಳಿನಿ ಕಾರಿಯಪ್ಪರವರು ಮತ್ತು ಅವರ ಸಹೋದರ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರಿಗೆ ಮಂಜೂರಾಗಿದ್ದ ಅರಣ್ಯ ಜಮೀನಿನ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. (ಗೊಂದಲ) De-notify ಆಗಿರುವ ಬಗ್ಗೆ ನಮ್ಮಲ್ಲಿ ಎಲ್ಲಾ ಮಾಹಿತಿ ಇದೆ. ತಮ್ಮಲ್ಲಿ ಇಲ್ಲ. ಇಡೀ ಕೊಡಗು ಜಿಲ್ಲೆಯಲ್ಲಿ ಎಷ್ಟು ಪ್ರದೇಶ de-notify ಆಗಿದೆ ಎಂಬ ಬಗ್ಗೆ ಎಲ್ಲಾ ಮಾಹಿತಿ ನಮ್ಮಲ್ಲಿ ಇದೆ. ಇಲಾಖೆಯಲ್ಲಿ ಮಾಹಿತಿ ಇಲ್ಲ ಎಂದು ತಾವು ಹೇಳಿದಿರಿ. ಎಲ್ಲಾ ಮಾಹಿತಿಯನ್ನು ತಮ್ಮ ಗಮನಕ್ಕೆ ನಾನು ತರುತ್ತೇನೆ. ಅದೇ ರೀತಿಯಲ್ಲಿ ಬೇರೆ ಬೇರೆ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ಹೆಚ್ಚಿಗೆ ಹೇಳುವುದಿಲ್ಲ, ಕೆಲವು pointಗಳನ್ನು ಹೇಳುತ್ತೇನೆ. ನಮ್ಮ ಜಿ.ಟಿ. ಪಾಟೀಲ್‌ರವರು ಸಹ ಶ್ರೀಗಂಧ ರಕ್ಷಣೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಬಗ್ಗೆ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ:– ಮಾನ್ಯ ಅಧ್ಯಕ್ಷರೆ, ನಕ್ಸ್‌ಲೈಟ್ ಏರಿಯಾದ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೇ, ಈ ವಿಷಯದ ಬಗ್ಗೆ ಆಮೇಲೆ ಹೇಳಿ. ಮೊದಲು ಉತ್ತರವನ್ನು ಪೂರೈಸಿ. ನಕ್ಸಲೈಟ್‌ಗಳು ಎಲ್ಲಿದ್ದಾರೆ? ಯಾರೋ

ಇಬ್ಬರು ಅಲ್ಲಿಗೆ ಹೋಗಿ ಸರಾಯಿ ಕುಡಿಯುವುದು ಮತ್ತು ಮಟನ್ ತಿನ್ನುವ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಬಯಲು ಸೀಮೆ ಪ್ರದೇಶಗಲ್ಲಿ ಸಸಿಗಳನ್ನು ನಡೆಬೇಕೆಂದು ಬಯಲು ಸೀಮೆ ಪ್ರದೇಶದ ಎಲ್ಲಾ ಮಾನ್ಯ ಸದಸ್ಯರುಗಳ ಮನವಿಯಾಗಿದೆ. ಆದ್ದರಿಂದ, ಬಯಲು ಸೀಮೆ ಪ್ರದೇಶಗಳಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಮಾಡಬೇಕೆಂದು ಲಕ್ಷ ವೃಕ್ಷ ಅಭಿಯಾನವನ್ನು ಮಾಡಿಕೊಂಡು ಮೊದಲಿಗೆ ಬಯಲು ಸೀಮೆ ಪ್ರದೇಶವಾದ ಬೀದರ್‌ನಲ್ಲಿ ಕೂಡ ಈ ಕಾರ್ಯಕ್ರಮ ಮಾಡಲಾಗಿದೆ. ಕೆಲವು ಜಿಲ್ಲೆಗಳಿಗೆ ಭೇಟಿ ಕೊಟ್ಟಾಗ ಬಯಲು ಸೀಮೆ ಪ್ರದೇಶಗಳಲ್ಲಿ ಕೂಡ ಇಂಥ ಸಸಿಗಳನ್ನು ನೆಡಬೇಕೆಂಬ ಬೇಡಿಕೆ ಬಂತು. ಈಗ ಈ ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ:– ಮಾನ್ಯ ಸಚಿವರೇ, ಬಯಲು ಸೀಮೆಯಲ್ಲಿ ಸಸಿಗಳನ್ನು ನೆಡುವಾಗ ಪ್ರಾರಂಭದಲ್ಲಿ...

ಅಧ್ಯಕ್ಷರು:– ಮಾನ್ಯ ಸಚಿವರೇ, ಈಗಾಗಲೇ ಸಮಯ ಆಗಿದೆ. ತಾವು ಈ ಕಡೆ ಮಾತನಾಡಿ.

ಡಾ॥ ಕೆ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ಬಯಲುಸೀಮೆ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆ.

ಅಧ್ಯಕ್ಷರು:– ಈಗ ಆ ವಿಷಯ ಸಾಕು. ಮಾನ್ಯ ಸಚಿವರೇ ತಾವು ಈ ಕಡೆ ನೋಡಿಕೊಂಡು ಉತ್ತರ ಕೊಡಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಪಕ್ಷಿಧಾಮ ಮಾಡಬೇಕೆಂದು ಮಾನ್ಯ ಜೆ.ಟಿ. ಪಾಟೀಲ್‌ರವರು ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ಗಮನಹರಿಸುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಸಕಲೇಶಪುರ ಕ್ಷೇತ್ರದ ಶಾಸಕರಾಗಿರುವ ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಇವತ್ತು ಖಾಸಗಿ

ಜಮೀನಿನಲ್ಲಿ ಮರಕಡಿತಲೆ ಸಂಬಂಧಿಸಿದ ಪ್ರಕ್ರಿಯೆಗೆ ಮರಗಳ ಮಾಲೀಕತ್ವವನ್ನು ಕಂದಾಯ ಇಲಾಖೆಯಿಂದ ಹಾಗೂ ಸರ್ವೆ ಕಾರ್ಯಗಳನ್ನು ಲ್ಯಾಂಡ್ ರೆಕಾರ್ಡ್ಸ್ ಇಲಾಖೆಯಿಂದ ಮಾಡಿಸಬೇಕಾಗಿದೆ. ಆದರೆ, ಈ ಪ್ರಕ್ರಿಯೆ ವಿಳಂಭವಾಗಿರುವುದು ಗಮನಕ್ಕೆ ಬಂದಿದೆ. ಇದರ ಬಗ್ಗೆ ಸರಳೀಕರಣಗೊಳಿಸುವುದಕ್ಕೆ ಪ್ರಯತ್ನಿಸಲಾಗುವುದೇ ಎಂದು ಕೇಳಿದ್ದಾರೆ. ಈ ಪ್ರಕ್ರಿಯೆಯನ್ನು ಸಕಾಲದ ಅಡಿಯಲ್ಲಿ ತರುವುದಕ್ಕೆ ನಿಶ್ಚಯವನ್ನು ಮಾಡಿದ್ದೇವೆ. ಇದನ್ನು ಸಕಾಲದ ಅಡಿಯಲ್ಲಿ ತರುವುದಕ್ಕೆ ನಿಶ್ಚಯವನ್ನು ಮಾಡಿದ್ದೇವೆ. ಇದನ್ನು ಸಕಾಲದ ಅಡಿಯಲ್ಲಿ ತಂದು ಬಹಳ ಶೀಘ್ರವಾಗಿ ಇತ್ಯರ್ಥ ಮಾಡುವುದಕ್ಕೆ ಒಂದು ಕಾಲಮಿತಿಯನ್ನು ತರುತ್ತೇವೆ. ಮತ್ತೆ ಏಲಕ್ಕಿ ತೋಟದಲ್ಲಿ ಮರಕಡಿಯತಕ್ಕಂಥದಕ್ಕೆ ಸ್ವಲ್ಪ ಸಮಸ್ಯೆ ಇದೆ. ಇದರ ಬಗ್ಗೆ ಸಾಂಬಾರು ಮಂಡಳಿಯಿಂದ ವರದಿ ಪಡೆದು ಶೀಘ್ರ ಆದೇಶ ಪಡೆಯುವುದಕ್ಕೆ ನಾವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಕಾಫಿ ಪ್ರದೇಶದಲ್ಲಿ ಮರಗಳನ್ನು ಕಡಿಯುವುದಕ್ಕೆ ಅವಕಾಶ ಇದೆ. ಆಶ್ರಯ ಮನೆಗಳಿಗೆ ಜಾಗ ಕೊಡಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ, ಅರಣ್ಯ ಪ್ರದೇಶದಲ್ಲಿ ನಿವೇಶನ ಕೊಡುವುದಕ್ಕೆ ಅವಕಾಶ ಇಲ್ಲದೆ ಇರತಕ್ಕಂಥದು ತಮ್ಮೆಲ್ಲರಿಗೂ ಸಹ ಗೊತ್ತಿದೆ.

ಶ್ರೀ ಬಿ.ಬಿ. ನಿಂಗಯ್ಯ:- ಡೀಮ್ಡ್ ಫಾರೆಸ್ಟ್‌ನಲ್ಲಿ ನಿವೇಶನಕ್ಕೆ ಅವಕಾಶ ಕೊಡಬೇಕು.

ಶ್ರೀ ಬಿ. ರಮಾನಾಥ ರೈ:- ಮಾನ್ಯ ನಿಂಗಯ್ಯನವರೇ, ಡೀಮ್ಡ್ ಫಾರೆಸ್ಟ್‌ನಲ್ಲಿ ನಿವೇಶ ಕೊಡುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ. ಆದ್ದರಿಂದ, ಈ ಬಗ್ಗೆ ಮತ್ತೆ ಮತ್ತೆ ಏಕೆ ಮಾತನಾಡುತ್ತೀರಿ? ಉತ್ತರ ಕನ್ನಡ ಜಿಲ್ಲೆಯಲ್ಲಿ 80%ನಷ್ಟು ಅರಣ್ಯ ಭೂಮಿ ಇದ್ದು, ಇಲ್ಲಿ ಹೆಚ್ಚಾಗಿ ಕಳ್ಳ ಸಾಗಾಣಿಕೆ ಆಗುತ್ತದೆ ಎಂದು ಮಾನ್ಯ ಶಿವರಾಂ ಹೆಬ್ಬಾರ್‌ರವರು ಹೇಳಿದ್ದಾರೆ ಹಾಗೆಯೇ ಅರಣ್ಯ ಅಪರಾಧ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ವಾಹನಗಳನ್ನು ಅಲ್ಲಿಯೇ ಇಟ್ಟುಕೊಂಡು ಅದನ್ನು ಕೆಡಿಸತಕ್ಕಂಥ ಕೆಲಸ ಆಗುತ್ತಿದೆ ಎಂದು

ಮತ್ತು ಅದಕ್ಕೆ ಹಣವನ್ನು ಡೆಪಾಸಿಟ್ ಮಾಡಿಸಿಕೊಳ್ಳುವಂಥ ಕೆಲಸವನ್ನು ಕಾನೂನಿನಲ್ಲಿ ಏಕೆ ಮಾಡಬಾರದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅಗತ್ಯ ಇದ್ದಲ್ಲಿ ಇದಕ್ಕೆ ತಿದ್ದುಪಡಿ ತರಲು ನಾವು ಪ್ರಯತ್ನವನ್ನು ಮಾಡುತ್ತೇವೆ ಹಾಗೆಯೇ ವಿಳಂಭವನ್ನು ತಪ್ಪಿಸುವ ಸಲುವಾಗಿ ಈ ಪ್ರಕ್ರಿಯೆಯನ್ನು online ಮೂಲಕ ವಿಲೇವಾರಿ ಮಾಡುವುದಕ್ಕೂ ಸಹ ಕ್ರಮ ಕೈಗೊಳ್ಳಲಾಗುತ್ತದೆ. ಸ್ಥಳೀಯ ನಾಟಿ ವೈದ್ಯರು ಗಿಡ ಮೂಲಿಕೆಗಳನ್ನು ಬೆಳೆಸಲು ಅನುಮತಿ ನೀಡುವ ಬಗ್ಗೆ ಅವರು ಹೇಳಿದ್ದಾರೆ. ಈ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಅಂದರೆ, ಸ್ಥಳೀಯ ನಾಟಿ ವೈದ್ಯರಿಗೆ ಗಿಡ ಮೂಲಿಕೆಗಳನ್ನು ಬೆಳೆಸುವುದಕ್ಕೆ ಅವಕಾಶ ಮಾಡಿಕೊಡತಕ್ಕಂಥದ್ದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. Canara Privilege Act ಸವಲತ್ತುಗಳು ಕರ್ನಾಟಕ ಅರಣ್ಯ ಕಾಯಿದೆ 1963 ರ ಮತ್ತು Forest Manual 1976 ರಲ್ಲಿ ಇರುವುದನ್ನು ಮುಂದುವರಿಸಬೇಕೆಂದು ಕೇಳಿದ್ದಾರೆ. ಆದರೆ, ಈ ವ್ಯವಸ್ಥೆ ಈಗಲೂ ಸಹ ಇದೆ ಎಂದು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಜೀವರಾಜ್‌ರವರು ಸಹ ಮಾತನಾಡಿ ಅರಣ್ಯ ಪರಿಸರ ಇಲಾಖೆ ನೆಡುತೋಪುಗಳಲ್ಲಿ 76 ಲಕ್ಷ ಸಸಿಗಳನ್ನು ನೆಟ್ಟಿದ್ದು ಇದರಲ್ಲಿ 26 ಲಕ್ಷ ಸಸಿಗಳು ಮಾತ್ರ ಬದುಕಿ ಉಳಿದಿವೆ ಎಂದು ಪ್ರಸ್ತಾಪಿಸಿದ್ದಾರೆ. ಕೃಷಿ ಪ್ರೋತ್ಸಾಹ ಯೋಜನೆಯಲ್ಲಿ ನಾವು ರೈತರಿಗೆ ಕೊಡತಕ್ಕಂಥ ಗಿಡದ ಬಗ್ಗೆ ತಮ್ಮೆಲ್ಲರಿಗೂ ಸಹ ಗೊತ್ತಿದೆ. ಮೂರು ವರ್ಷಗಳವರೆಗೆ ನಾವು ಪ್ರೋತ್ಸಾಹಧನವನ್ನು ಕೊಡುತ್ತೇವೆ. ಅದರಲ್ಲಿ ಇಷ್ಟನ್ನು ಉಳಿಸಿಕೊಂಡಿದ್ದಾರೆಂದು ನಾನು ಹೇಳಿದ್ದೇನೆ. ಕೃಷಿ ಪ್ರೋತ್ಸಹ ಹಣ 45 ರೂಪಾಯಿಯನ್ನು ಮೂರು ವರ್ಷದವರೆಗೆ ಕೊಡಲಾಗುತ್ತದೆ. ಆದರೆ, ಇದನ್ನು 100 ರೂಪಾಯಿ ಏರಿಸುವುದಕ್ಕೆ ಸರ್ಕಾರ ಚಿಂತನೆ ಮಾಡಿದೆ. ಕೃಷಿ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಗಿಡಗಳನ್ನು ನೆಡುವುದಕ್ಕೆ ಪ್ರೋತ್ಸಾಹ ಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ಹಣ್ಣು ಬಿಡುವ ಗಿಡಗಳನ್ನು ನೆಡುವ ಬಗ್ಗೆ ನಾವು ಈಗಾಗಲೇ ಮಾತನಾಡಿದ್ದೇವೆ. ಆಕೇಶಿಯ ಗಿಡಗಳನ್ನು ನೆಡುವ ಬದಲು ಹಣ್ಣು ಬಿಡುವ ಗಿಡಗಳನ್ನು

ನೆಡುವಂಥ ಕೆಲಸ ಆಗಿದೆ. ಕಾಫಿ ಗಿಡಗಳನ್ನು ಕಡಿದು ಅದನ್ನು ಸೀಮೆ ಎಣ್ಣೆ ಸುರಿದು ನಾಶಪಡಿಸುತ್ತಿದ್ದಾರೆಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಒತ್ತುವರು ಮಾಡಿ ಬೆಳೆಸಿದ ಗಿಡಗಳನ್ನು ತೆರವುಗೊಳಿಸಿದ ಸಂದರ್ಭದಲ್ಲಿ ಕಾಫಿ ಗಿಡವನ್ನು ಕಡಿಯದೆ ಹಾಗೆಯೇ ಉಳಿಸಿಕೊಳ್ಳುಬಹುದೆಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದ್ದು ಕಾಫಿ ಬೆಳೆಯುವ ಅರಣ್ಯೇತರ ಚಟುವಟಿಕೆಯಲ್ಲಿ ಈ ಕಾನೂನಿನ ಪರಿಶೀಲನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಅರಣ್ಯ ಪ್ರದೇಶದಲ್ಲಿ ವಾಸಿಸುವ ಜನರ ಬಗ್ಗೆ ಕೇಳಿದ್ದಾರೆ.

ಶ್ರೀ ವಿ. ಸುನೀಲ್ ಕುಮಾರ್:– ಅರಣ್ಯ ಇಲಾಖೆ ಕಾಫಿ ಗಿಡಗಳನ್ನು ಉಳಿಸಿಕೊಳ್ಳಬಹುದು. ಆದರೆ, ಸೀಮೆ ಎಣ್ಣೆ ಹಾಕಿ ಎಂದು ಕಾನೂನಿನಲ್ಲಿ ಇದೆಯೇ ಎಂದು ಕೇಳಲಾಗಿದೆ.

ಶ್ರೀ ಬಿ. ರಮಾನಾಥ ರೈ:– ಸೀಮೆ ಎಣ್ಣೆ ಹಾಕುತ್ತಾರೆಂದು ನನ್ನ ಗಮನಕ್ಕೆ ತಂದಿದ್ದಾರೆ.

ಶ್ರೀ ವಿ. ಸುನೀಲ್ ಕುಮಾರ್:– ಇದನ್ನು ಮಾಡುವುದನ್ನು ಬಿಡಲಾಗುತ್ತದೆ ಎಂದು ಹೇಳುವ ಬದಲು ಅದರ ಬಗ್ಗೆ ಕಾನೂನು ಪರಿಶೀಲನೆ ಮಾಡತಕ್ಕಂಥದು ಏನಿದೆ?

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಅವರು ಹೇಳಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಸೀಮೆ ಎಣ್ಣೆ ಹಾಕುವುದಕ್ಕೆ ಪರಿಶೀಲನೆ ಮಾಡುತ್ತೇನೆಂದು ಹೇಳಿಲ್ಲ. ಅಂಥದ್ದು ಏನಾದರೂ ಪ್ರಕರಣಗಳು ಇದ್ದಿದ್ದರೆ ಅದನ್ನು ಮಾಡದಂತೆ ತಡೆಯುವಂಥ ಕ್ರಮವನ್ನು ಕೈಗೊಳ್ಳುತ್ತೇವೆ ಎಂಬ ಮಾತನ್ನು ನಾನು ಹೇಳಿದ್ದೇನೆ. ಬಹುಶಃ ಅದನ್ನು ತಾವು ಹೇಳದೆ ಇದ್ದಿದ್ದರೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ. ಒತ್ತುವರಿ ಸಮಸ್ಯೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಂದರೆ, ಇನಾಂ ಜಮೀನು ಒತ್ತುವರಿ ಇರಬಹುದು. ನಾವು ಈಗಾಗಲೇ ಒಂದು affidavit ಅನ್ನು

ಹೈಕೋರ್ಟ್‌ಗೆ ಕೊಟ್ಟಿದ್ದೇವೆ. ಅವರು 4 ತಿಂಗಳ ಅವಕಾಶವನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಸ್ವಲ್ಪ ಭಾಗವನ್ನು ಅಂದರೆ, 3 ಎಕರೆ ಕೊಡತಕ್ಕಂಥದಕ್ಕೆ ಅವಕಾಶ ಇದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ, ಆ ಬಗ್ಗೆ ಕೂಡ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಡವರು ಮತ್ತು ಬಹಳ ಕಷ್ಟದಲ್ಲಿದ್ದಂಥವರದ್ದು ಏನಾದರೂ replacement ಆದಲ್ಲಿ ಅವರಿಗೆ ಪರಿಹಾರದ ರೂಪದಲ್ಲಿ ಏನಾದರೂ ಜಾಗವನ್ನು ಕೊಡತಕ್ಕಂಥದರ ಬಗ್ಗೆ ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಮಾನ್ಯ ಚಿಕ್ಕಮಾದುರವರು ಮಾತನಾಡಿ ಅರಣ್ಯ ಭೂಮಿಯ ಗಡಿ ಗುರುತಿಸುವ ಕೆಲಸವನ್ನು ಮಾಡಬೇಕೆಂದು ಹೇಳಿದ್ದಾರೆ. ಆದರೆ, ಅರಣ್ಯ ಪ್ರದೇಶದ ಗಡಿಯನ್ನು ಈಗಾಗಲೇ ಗುರುತಿಸಲಾಗಿದೆ. ಏಕೆಂದರೆ ಕೆಲವು ಕಡೆ ಅರಣ್ಯ ಜಾಗವನ್ನು ಗುರುತಿಸಿದ ನಂತರ encroachment ಆಗಿರತಕ್ಕಂಥದ್ದು ಬಹಳ ಕಡೆ ಇದೆ. ನಾವು ಅಲ್ಲಿ ಗಡಿ ಗುರುತು ಮಾಡುವಾಗ ಅದನ್ನು ಹೊರತುಪಡಿಸಿ ಗಡಿ ಗುರುತು ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಕಡೆ ಇದರ ಸಮಸ್ಯೆ ಕೂಡ ಇದೆ. Demarcation ಮಾಡತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ. ಕಂದಾಯ ಇಲಾಖೆಯ ಸರ್ವೆ ನಂಬರ್‌ನಲ್ಲಿ ಅರಣ್ಯ ಮತ್ತು ಕಂದಾಯ ಎಂದು ಒಂದೇ ಸರ್ವೆ ನಂಬರ್‌ನಲ್ಲಿದ್ದರೆ ಅದನ್ನು ಕೂಡ demarcation ಮಾಡುವುದಕ್ಕೆ ನಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇವೆ. ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ನಾವು ಒಂದು ಕ್ರಮವನ್ನು ಕೈಗೊಂಡಿದ್ದೇವೆ. ಅಂದರೆ, ದಿನಾಂಕ 26.02.2014 ರಂದು ಸಭೆ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದೇನೆಂದರೆ, ಅರಣ್ಯ ಹಕ್ಕು ಸಮಿತಿ ಮುಂದೆ ಅರ್ಜಿ ಹಾಕಿದವರಲ್ಲಿ ಸಾಕಷ್ಟು ಜನರ ಅರ್ಜಿ ತಿರಸ್ಕೃತವಾಗಿದೆ ಎಂದು ಮತ್ತೆ ಅರ್ಜಿ ಹಾಕುವುದಕ್ಕೆ ಅವಕಾಶ ಇಲ್ಲದೆ ಇರತಕ್ಕಂಥ ಸಂದರ್ಭಗಳು ಬಂದಿವೆ. ಆದ್ದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಸಬ್ ಕಮಿಟಿ ರಚನೆ ಮಾಡಲಾಗಿದೆ. ಇದು ದಿ.26.02.2014 ರಂದು ಸಭೆ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಗ್ರಾಮ ವಿಭಾಗದ ಜಿಲ್ಲಾ

ಮಟ್ಟದ ಸಮಿತಿಗಳನ್ನು 31.03.2014ರೊಳಗೆ ರಚಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಹಿಂದೆ ತಿರಸ್ಕರಿಸಿದ ಅರ್ಜಿಗಳನ್ನು ಈ ಸಮಿತಿಯಲ್ಲಿ ಮರುಪರಿಶೀಲಿಸಿ ಇತ್ಯರ್ಥಗೊಳಿಸಬೇಕೆಂದು ಹೇಳಿದ್ದೇವೆ. ಮರು ಪರಿಶೀಲಿಸಿದ ಅರ್ಜಿಗಳನ್ನು ನಾವು ಮತ್ತೆ ಗ್ರಾಮಮಟ್ಟದ ಸಮಿತಿಯಲ್ಲಿ ಸಹಾಯ ಮಾಡಲು ಪ್ರೇರಕರನ್ನು ನೋಡಲ್ ಏಜೆನ್ಸಿಯಾಗಿ ಸಮಾಜ ಕಲ್ಯಾಣ ಇಲಾಖೆ 1500 ರೂಪಾಯಿ ಗೌರವಧನವನ್ನು ಪ್ರೇರಕರಿಗೆ ಕೊಡಲಾಗುವುದು.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಸಚಿವರೇ, ಕಾಲ ಮಿತಿಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಏಕೆಂದರೆ, ಜೂನ್ 30 ರೊಳಗೆ ಹಾಕಿಕೊಳ್ಳಬೇಕೆಂದು ಮಾಡಿದ್ದೀರಿ. ಆದರೆ, ಇನ್ನೂ ಬಹಳ ಜನ ಅರ್ಜಿ ಹಾಕಿಕೊಂಡಿಲ್ಲ. ಆದ್ದರಿಂದ, 2–3 ತಿಂಗಳು ಕಾಲಾವಕಾಶವನ್ನು ಜಾಸ್ತಿ ಮಾಡಿ.

ಅಧ್ಯಕ್ಷರು:– ಅರ್ಜಿ ಹಾಕುವುದಕ್ಕೆ ಕಾನೂನಿನಲ್ಲಿ open ಆಗಿ ಇದೆ. ಮಾನ್ಯ ಸಚಿವರು ಏನೋ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಆಯಿತು ಬಿಡಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ವಿಲೇವಾರಿ ಮಾಡುವಂಥ ಸಂದರ್ಭದಲ್ಲಿ ಯಾರನ್ನು ಒಕ್ಕಲೆಬ್ಬಿಸುವಂಥ ಕೆಲಸವನ್ನು ನಾವು ಮಾಡುವುದಿಲ್ಲ. ಅದು ತೀರ್ಮಾನವಾದ ನಂತರವೇ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಸ್ಪಷ್ಟತೆ ಇಲ್ಲ.

ಅಧ್ಯಕ್ಷರು:– ಬೇಗ ಪೂರೈಸಿ.

ಶ್ರೀ ಬಿ. ರಮಾನಾಥ ರೈ:– ಅನೇಕ ಸಮಸ್ಯೆಗಳ ಬಗ್ಗೆ ಪುಟ್ಟರಂಗಶೆಟ್ಟಿ, ಶಾಸಕರು, ಚಾಮರಾಜ ನಗರ ಅವರು ಕೂಡ ಅನೇಕ ಪ್ರಶ್ನೆಗಳನ್ನು ಕೇಳಿರುತ್ತಾರೆ. ಮಂಗಳೂರು ಶಾಸಕರಾದ ಲೋಬೋರವರು ಕೂಡ ಪಶ್ಚಿಮಘಟ್ಟ ಅರಣ್ಯ ಜೀವವೈವಿಧ್ಯಗಳ ಅವುಗಳ ಮೇಲೆ ಇರುವ ಒತ್ತಡಗಳನ್ನು

ಸವಿಸ್ತಾರವಾಗಿ ವ್ಯಕ್ತಪಡಿಸಿ ಸಂರಕ್ಷಣೆಯ ಬಗ್ಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ಕೂಡ ನಾವು ಪರಿಶೀಲನೆ ಮಾಡುತ್ತೇವೆ. Forest Settlement Officers ಅದರ ತೀರ್ಮಾನ ಮಾಡಲಿಕ್ಕೆ ಆದಷ್ಟು ಬೇಗ ಶೀಘ್ರದಲ್ಲಿ ನಾವು ಒಂದು ನೇಮಕಾತಿ ಮಾಡಲಿಕ್ಕೆ ಒಂದು ಹೊಸ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳುತ್ತೇವೆ. ಪಿಳಿಕುಳ ನಿಸರ್ಗಧಾಮದಲ್ಲಿ ಪರಿಸರದ ಬಗ್ಗೆ ಮಕ್ಕಳಿಗೆ ಜಾಗ್ರತಿಯನ್ನು ಮೂಡಿಸುವ ಬಗ್ಗೆ ಕಾರ್ಯಕ್ರಮ ಮಾಡಬೇಕೆಂದು ಹೇಳಿದ್ದಾರೆ ಇದರ ಬಗ್ಗೆ ಕೂಡ ನಾವು ಗಮನವನ್ನು ಹರಿಸುತ್ತೇವೆ. ಮಾನ್ಯ ಬಿ.ಆರ್. ಪಾಟೀಲ್‌ರವರು ಪರಿಸರದ ಕಾಳಜಿಯನ್ನು ಇಟ್ಟುಕೊಂಡು ಹಲವಾರು ಸಲಹೆಗಳನ್ನು ತಾವೇನು ಕೊಟ್ಟಿದ್ದೀರಿ ಅರಣ್ಯ ವಿನಾಶದಿಂದ ಬರಗಾಲ ಇತ್ಯಾದಿ ದುಷ್ಪರಿಣಾಮಗಳನ್ನು ತಡೆಯಲು ನಮಗೆ ಸಲಹೆಗಳನ್ನು ಕೊಟ್ಟಿದ್ದೀರಿ. ಈಗಾಗಲೇ 5000 ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದ್ದು ಈ ಸಮಿತಿ ಹೆಚ್ಚು ಕ್ರೀಯಾಶೀಲವಾಗಿ ಅರಣ್ಯ ಸಂರಕ್ಷಣೆಯ ಅಭಿವೃದ್ಧಿ ತೊಡಗಿಸಲು ಅವರು ಕೆಲಸಗಳನ್ನು ಮಾಡುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:– ನನ್ನ ಕಳಕಳಿ ಚಳುವಳಿ ರೂಪದಲ್ಲಿ ಅರಣ್ಯ ಬೆಳೆಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಮಕ್ಕಳನ್ನು ಇದರಲ್ಲಿ involve ಮಾಡಿ.

ಶ್ರೀ ಬಿ. ರಮಾನಾಥ ರೈ:– ಅರಣ್ಯ ಉಳಿಸಬೇಕಾದರೆ ಜನಜಾಗ್ರತಿ ಕಾರ್ಯಕ್ರಮ ಆಗಬೇಕೆನ್ನುವ ತಮ್ಮ ಒಂದು ಅಪೇಕ್ಷೆ ಇದೆ. ಇವತ್ತು ಎಲ್ಲಾ ಮತಗಳು ಇರಬಹುದು, corporate ಜಗತ್ತು ಇರಬಹುದು, ಎಲ್ಲರನ್ನು ಕೂಡ involvement ಮಾಡಿಸಿ ಅರಣ್ಯವನ್ನು ಬೆಳೆಸಲಿಕ್ಕೆ ನಾವು ಪ್ರೋತ್ಸಾಹ ಕೊಡತಕ್ಕಂಥ ಒಂದು ಕೆಲಸವನ್ನು ನಾವು ಮಾಡುತ್ತೇವೆ. ಈಗಾಗಲೇ ನಾವು ಲಕ್ಷವೃಕ್ಷ ಅಭಿಯಾನ ಅಂದರೆ, ಎಲ್ಲಾ ಇಲಾಖೆಗೆ ಅಧಿಕಾರಿಗಳನ್ನು ಒಟ್ಟಿಗೆ ಸೇರಿಸಿಕೊಂಡು ಎಲ್ಲಾ ಜಿಲ್ಲೆಗಳಲ್ಲಿ ಮಾಡಬೇಕು ಎನ್ನುವ ಒಂದು ಕಾರ್ಯಕ್ರಮ ಇದೆ. ಎಲ್ಲಾ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಜಾಗದಲ್ಲಿ ಮರ ನೆಡತಕ್ಕಂಥ ಕಾರ್ಯಕ್ರಮಕ್ಕೆ ಹೆಚ್ಚು ಉತ್ತೇಜನ ಕೊಡುವಂಥ

ಕಾರ್ಯಕ್ರಮವನ್ನು ನಾವು ಮಾಡುತ್ತೇವೆ. ಮಾನ್ಯ ದೊಡ್ಡಮನಿಯವರು ಸಸ್ಯ ಪ್ರದೇಶವಾಗಿರುವ ಕಪ್ಪತಗುಡ್ಡದ ಬಗ್ಗೆ ಮಾತನಾಡಿದ್ದಾರೆ ಅದನ್ನು ಔಷಧಿವನವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇವೆ. ಆ ಪ್ರದೇಶದಲ್ಲಿ ಹಣ್ಣಿನ ಗಿಡಗಳನ್ನು ನೆಡಬೇಕು ಎಂದು ಕೇಳಿದ್ದಾರೆ, ಅದರ ಬಗ್ಗೆ ಕೂಡ ನಾವು ಗಮನವನ್ನು ಹರಿಸುತ್ತೇವೆ. ಮಾನ್ಯ ಶಾರದಾ ಪೂರ್ಯನಾಯಕ್‌ರವರು ಶರಾವತಿಯ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ, ಭೂಮಿ ಕಳೆದುಕೊಂಡವರ ಬಗ್ಗೆ ಕೂಡ ನಾವು ಹೇಳಿದ್ದೇವೆ. ಮಾನ್ಯ ರಮೇಶ್ ಕುಮಾರ್‌ವರು ಬಳ್ಳಾರಿ ಜಾಲಿಯನ್ನು ಕೆರೆಗಳಲ್ಲಿ ಹಾಕಿದ್ದಾರೆಂದು ಹೇಳಿದ್ದಾರೆ ಅದರ ಬಗ್ಗೆ ಕೂಡ ನಾವು ಜಾತಿ ಮರಗಳನ್ನು ನೆಡಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ನಾವು ಗಮನವನ್ನು ಹರಿಸುತ್ತೇವೆ. ಮಾನ್ಯ ಅಂಗಾರವರು ಕಾಣೆ ಬಾಣೆ, ಕಮ್ಮಿ ವಿಚಾರವಾಗಿ ಮಾತನಾಡಿದ್ದಾರೆ, ಅದು ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇವೆ. ಮಾನ್ಯ ನಿಂಗಯ್ಯನವರು ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಡವರಿಗೆ ನಿವೇಶನ ಹಂಚಿಕೆ ಮಾಡಿರುವ ಪ್ರದೇಶವು ಅರಣ್ಯ ಪ್ರದೇಶವಾಗಿದ್ದಲ್ಲಿ ಅರಣ್ಯ ಸಂರಕ್ಷಣೆ ಕಾಯಿದೆಯನ್ವಯ ಅದಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ. ವಸತಿ ನಿರ್ಮಾಣಕ್ಕೆ ಸಾಮಾನ್ಯವಾಗಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಒಪ್ಪಿಕೊಳ್ಳುವುದಿಲ್ಲ. ಆದರೂ ಕೂಡ ತಾವು ಪ್ರಸ್ತಾವನೆ ಕೊಟ್ಟರೆ ಅದನ್ನು ಪರಿಶೀಲನೆ ಮಾಡಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ. ಕಳಸಾ ಪ್ರಾಜೆಕ್ಟ್‌ನಲ್ಲಿ ಕುಡಿಯುವ ನೀರಿನ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲಾಗುವುದು. ನೀವು ನೀರಿನ ಸಮಸ್ಯೆ ಬಗ್ಗೆ ಹೇಳಿದ್ದೀರಿ ಅದನ್ನು ಪರಿಗಣಿಸಲಾಗುವುದು. ಮಾನ್ಯ ಹ್ಯಾರಿಸ್‌ರವರು ನಗರದಲ್ಲಿ ಸಸಿ ನೆಡುವುದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಜಿ.ಟಿ. ದೇವೇಗೌಡರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀನಿವಾಸ್ ಶೆಟ್ಟಿಯವರು C and D ಜಮೀನನ್ನು ಡೀಮ್ಡ್ ಫಾರೆಸ್ಟ್ ಪ್ರದೇಶವನ್ನು ಬಗರ್ ಹುಕುಂ ಸಾಗುವಳಿದಾರರ ಬಗ್ಗೆ ತೊಂದರೆ ಆಗಬಾರದು ಅದು ಕೂಡ ಡೀಮ್ಡ್ ಫಾರೆಸ್ಟ್‌ನಲ್ಲಿ ಏನು ಮಾಡಬೇಕು ಅದಕ್ಕೆ ಅನುಕೂಲ ಮಾಡುವಂಥ ಕಾರ್ಯಕ್ರಮವನ್ನು ಮಾಡುತ್ತೇವೆ. Reserved

forest ನಲ್ಲಿ 100 ಮೀಟರ್ ವ್ಯಾಪ್ತಿಯಲ್ಲಿ ಬರುವ ಸವಲತ್ತುಗಳನ್ನು ಮುಂದುವರೆಯುವಂಥದ್ದನ್ನು ಮಾಡುತ್ತೇವೆ ಎನ್ನುವಂಥದ್ದನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಗೋಪಾಲ್ ಪೂಜಾರಿಯವರು LAMPS societyಯಲ್ಲಿ ಕಂಟ್ರಾಕ್ಟರ್‌ಗಳಿಗೆ ಆಗುವ ತೊಂದರೆಗಳ ಬಗ್ಗೆ ಸ್ಥಳೀಯ ಅಧಿಕಾರಿಗಳ ಜೊತೆಯಲ್ಲಿ ಪರಿಶೀಲನೆ ಮಾಡು ಸೂಕ್ತ ಕ್ರಮ ಜರುಗಿಸಲಾಗುವುದು ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಉಪ ಅರಣ್ಯ ವನ್ಯಜೀವಿ ಸಂರಕ್ಷಣ ಅವರು ಅಸಹಕಾರ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ, ಆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುವುದು. ಹಾಗೆ CRZ ಗೋವಾ, ಕೇರಳ ರಾಜ್ಯದಲ್ಲಿ ಇದ್ದಂತೆ ನಮ್ಮಲ್ಲಿ ಸರಳೀಕರಣ ಮಾಡಲಿಕ್ಕೆ ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ, ಅವರು ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿ ಸೂಕ್ತವಾದ ರೀತಿಯಲ್ಲಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಿದ್ದು ನ್ಯಾಮಗೌಡ ಮತ್ತು ಕೆಲವಾರು ಜನ ಸದಸ್ಯರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ವಿಚಾರಗಳ ಬಗ್ಗೆ ಮಾನ್ಯ ಸುಧಾರಕರ್ ಲಾಲ್‌ರವರು, ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರಗಳ ಕಡೆ ಗಮನವನ್ನು ಹರಿಸಿಕೊಂಡು ಏನು ಸೂಕ್ತವಾದ ಕ್ರಮ ಕೈಗೊಳ್ಳಬೇಕಾಗಿದೆ ಅದನ್ನು ಮಾಡುತ್ತೇವೆ. ವನ್ಯಜೀವಿ ಪ್ರಾಣಿಸಂಘರ್ಷ, ಮಾನವ ಮತ್ತು ಪ್ರಾಣಿಸಂಘರ್ಷದ ಬಗ್ಗೆ ಅನೇಕ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಏಕೆಂದರೆ, ಕೃಷಿ ಪರಿಹಾರವನ್ನು ಹೆಚ್ಚಿಗೆ ಮಾಡಬೇಕೆನ್ನುವುದು ಎಲ್ಲರ ಬೇಡಿಕೆ. ಈಗಾಗಲೇ ನಾವು ಹಣಕಾಸು ಇಲಾಖೆಯಲ್ಲಿ ಪ್ರಸ್ತಾಪ ಇದೆ ಅದನ್ನು ಹೆಚ್ಚು ಮಾಡುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನೀವು ಮಾಡಿ ನಾಲ್ಕು ವರ್ಷವಾಗಿದೆ. ಇವತ್ತು ಬೆಳೆ ಏನು ಬೆಲೆ ಬಾಳುತ್ತದೆ ನೀವು ವೈಜ್ಞಾನಿಕವಾಗಿ ತೀರ್ಮಾನ ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಪರಿಹಾರ ಬಂದು 16 ತಿಂಗಳಾಯಿತು. ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ 95 ಲಕ್ಷ ರೂ.ಗಳ ಬಾಕಿ ಇದೆ. 16 ತಿಂಗಳಿನಿಂದ ಬಾಕಿ ಕೊಟ್ಟಿಲ್ಲ. ಕನಿಷ್ಠ ಪರಿಹಾರವನ್ನಾದರೂ ಕೊಡಬೇಕಲ್ಲವೆ? ನಿಮ್ಮ ಸರ್ಕಾರದಲ್ಲಿ ಹಣ ಇಲ್ಲವಾ ಅಥವಾ ಬೇರ ಏನು ಎನ್ನುವ ಪ್ರಶ್ನೆ.

ಅಧ್ಯಕ್ಷರು:– ಹಣ ಇಲ್ಲದೆ ಆಗಿರುವುದು ಮತ್ತಿನ್ನೇನು? ಆ ರೀತಿ ಆಗಿವೆ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ಏನು ತಂದಿದ್ದಾರೆ ಅದನ್ನು ಶೀಘ್ರದಲ್ಲಿ ಪರಿಹರಿಸಲಾಗುವುದು.

(ಗೊಂದಲ)

ಅಧ್ಯಕ್ಷರು:– ಬಜೆಟ್‌ನಲ್ಲಿ ಪರಿಹಾರಕ್ಕೋಸ್ಕರವೆಂದು specificಆಗಿ ಇಟ್ಟುಕೊಂಡಿದ್ದರೆ immediate ಆಗಿ ಕೊಡುತ್ತಾರೆ. ಇಲ್ಲವೆಂದರೆ, ಅವರು ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಹಣಕಾಸು ಇಲಾಖೆಗೆ ಹೋಗಿ ಕೊಳೆಯುತ್ತಾ ಕುಂತಿರುತ್ತವೆ ಹಾಗೆ ಆಗಿರುವುದು, ಮತ್ತೆಂಥದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ದಯಮಾಡಿ ಪರಿಹಾರವನ್ನು ವೈಜ್ಞಾನಿಕವಾಗಿ ಪರಿಸ್ಕರಣೆ ಮಾಡಿ. 2006 ರಲ್ಲಿ ಪರಿಹಾರ ಮೊತ್ತ ಮಾಡಿರುವುದು. ಬೇಗ ಆದೇಶವನ್ನು ಮಾಡಿಸಿ. ನಮ್ಮ ಕಡೆಯೆಲ್ಲ ದಿವಸ ಆನೆಗಳು ನುಗ್ಗುತ್ತಿವೆ. ಪರಿಹಾರ ಕೊಡಿಸುವುದು ಅಲ್ಲ, ಅದನ್ನು ಪರಿಸ್ಕರಣೆ ಮಾಡಬೇಕು. ಅದನ್ನು ನೀವು ಹೆಚ್ಚು ಮಾಡಬೇಕು. ನೀವು ಹಳೆಯ ಆದೇಶದ ಪರಿಹಾರವನ್ನು ಇಟ್ಟುಕೊಂಡಿದ್ದೀರಿ.

ಶ್ರೀ ಬಿ. ರಮಾನಾಥ ರೈ:– ನಿಧಾನವಾಗಿರುವ ಪರಿಹಾರವನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಹೆಚ್ಚು ಮಾಡಲಿಕ್ಕೆ ನಾವು ಖಂಡಿತ ಸೂಕ್ತವಾದ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ದೊಡ್ಡಮನಿ ರಾಮಕೃಷ್ಣ ಶಿದ್ಲಿಂಗಪ್ಪ:– ಅರಣ್ಯ ಬೆಂಕಿಗಾಹುತಿಯಾಗಿ, ಪ್ರಾಣಿ, ಪಕ್ಷಿಗಳು ಸತ್ತು ಹೋದವು.

ಶ್ರೀ ಬಿ. ರಮಾನಾಥ ರೈ:– ಅದರ ಬಗ್ಗೆ ಕೂಡ ಗಮನಹರಿಸಿ ಅದರಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:– ಪರಿಹಾರ ಅಂದರೆ, ಹುಲಿ, ಕರಡಿ, ಬೆಂಕಿಗೆ ಅನಾಹುತದಿಂದ ಆಗಿರುವುದಕ್ಕೆ ಒಂದು ತಿಂಗಳು ಅಥವಾ 15 ದಿವಸದಲ್ಲಿ ಪರಿಹಾರವನ್ನು ಕೊಟ್ಟು ಬಿಡಿ. ಅದರಲ್ಲಿ ದೊಡ್ಡದಾಗಿ ವಿಚಾರ ಮಾಡುವುದು ಏನು ಇದೆ.

ಶ್ರೀ ಬಿ. ರಮಾನಾಥ ರೈ:– ಅರಣ್ಯ ಪ್ರದೇಶದಲ್ಲಿ ಬೆಂಕಿ ಬಿದ್ದಿದ್ದರ ಬಗ್ಗೆ ಸಹಿತ ನಮ್ಮ ಗಮನಕ್ಕೆ ತಂದಿರುತ್ತಾರೆ. ಕೆಲವು ಸಲ ಸಂಘ ಸಂಸ್ಥೆಗಳವರು ಉದ್ದೇಶಪೂರ್ವಕವಾಗಿ ಮಾಡುತ್ತಾರೆಂದು ಹೇಳಿರುತ್ತೀರಿ. ಬಂಡಿಪುರದಲ್ಲಿ ಏನು ಬೆಂಕಿ ಬಿದ್ದಿದ್ದರ ಬಗ್ಗೆ ಜನರಿಗೆ ಏನು ಸಂಶಯ ಇತ್ತು ಈಗಾಗಲೇ ನಾವು ಸಿ.ಓ.ಡಿ.ತನಿಖೆಗೆ ಆದೇಶ ಮಾಡಿರುತ್ತೇವೆ. ಇಂತಹ ಪ್ರಕರಣ ಮಾಡಿದವರು ಇದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ. ಪಾರಂಪರಿಕವಾಗಿ ಇರುವ ಅರಣ್ಯ ಹಕ್ಕುಗಳು ಕಾಯಿದೆ ಅದರ ಬಗ್ಗೆ ನಾನು ಸಾಕಷ್ಟು ಹೇಳಿದ್ದೇನೆ ಇದರ ಬಗ್ಗೆ ಕೂಡ ಕ್ರಮ ಕೈಗೊಳ್ಳುತ್ತೇವೆ. ಹುಲಿ ಸಂರಕ್ಷಿತ ಪ್ರದೇಶ ವನ್ಯಜೀವಿ ಕುಟುಂಬಗಳಿಗೆ ಸ್ವ ಇಚ್ಛೆಯಿಂದ ಪುನರ್ ವಸತಿ ಕಲ್ಪಿಸುವ ಬಗ್ಗೆ ಕೆಲವು ಸದಸ್ಯರು ನನ್ನ ಗಮನಕ್ಕೆ ತಂದಿರುತ್ತಾರೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಾವು ಬಲತ್ಕಾರವಾಗಿ ತೆಗೆಯುವಂಥದು ಖಂಡಿತ ಇಲ್ಲ. ಹುಲಿ ಸುರಕ್ಷಿತ ಪ್ರದೇಶದಲ್ಲಿ ನಾವು ಬಲತ್ಕಾರವಾಗಿ ತೆಗೆಯುವಂಥದ್ದು

ಖಂಡಿತವಾಗಿಯೂ ಇಲ್ಲ. ಸ್ವಇಚ್ಛೆಯಿಂದ ಹೋಗತಕ್ಕಂಥವರಿಗೆ ಪರಿಹಾರ ಕೊಡುವಂತಹ ಕೆಲಸ ಮಾಡುತ್ತೇವೆ ಎನ್ನುವ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಡಿಕೇರಿ ಜಿಲ್ಲೆಯ ಬ್ರಹ್ಮಗಿರಿ, ಪುಷ್ಪಗಿರಿ, ತಲಕಾವೇರಿ ವನ್ಯಜೀವಿ ವ್ಯಾಪ್ತಿಯಲ್ಲಿ ಬರುವ ಅರಣ್ಯಪ್ರದೇಶಗಳನ್ನು ಮಂಜೂರು ಮಾಡುವ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ವನ್ಯಜೀವಿ ಪ್ರದೇಶವನ್ನು ಮತ್ತೆ ಸೇರಿಸಲು ಪ್ರಯತ್ನ ಆಗುತ್ತಿದೆ. ಅದಕ್ಕೆ ನಾವು ACSರವರ ನಾಯಕತ್ವದಲ್ಲಿ ಸಮಿತಿ ಮಾಡಿ ಪರಿಶೀಲಿಸಿ ಸಾಧಕ–ಬಾಧಕಗಳನ್ನು ವಿಮರ್ಶೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆನೆಧಾಮದ ಬಗ್ಗೆ ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಹೇಳಿದರು. ಅದರ ಬಗ್ಗೆ ಈಗಾಗಲೇ 20,000 ಹೆಕ್ಟೇರ್ ಸರ್ಕಾರಿ ಜಮೀನು ಏನಿದೆ ಅದನ್ನು ಸ್ವಾಧೀನ ಮಾಡಿಕೊಳ್ಳುವಂತಹ ಕಾರ್ಯವನ್ನು ಮಾಡುತ್ತೇವೆ. ಮುಂದೆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತೇವೆ. ಜೇಂಕಾರ ವನ್ಯಧಾಮ ಮಾಡಬೇಕೆಂದು ಆ ಪ್ರದೇಶದ ಶಾಸಕರು ಬೇಡಿಕೆ ಇಟ್ಟಿದ್ದಾರೆ. ಜೇಂಕಾರ ವನ್ಯಧಾಮ ಪ್ರದೇಶ ಮಾಡಲಿಕ್ಕೆ ನಾವು ಸೂಕ್ತ ಕ್ರಮವನ್ನು ಕೈಗೊಂಡಿದ್ದೇವೆ. ಆನೆ ಕಾರಿಡಾರ್ ಛಿದ್ರವಾಗಿರುವಂಥದ್ದು. . .

ಅಧ್ಯಕ್ಷರು:– ಗೊತ್ತಿದೆ. ಆನಂತರ ಎಲ್ಲಾ ಕುಳಿತುಕೊಂಡು ಮಾತನಾಡಿ.

ಶ್ರೀ ವಿ. ಸುನಿಲ್‌ಕುಮಾರ್:– ಮಾನ್ಯ ಸಚಿವರೆ, ಕಸ್ತೂರಿ ರಂಗನ್ ವರದಿ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ರಮಾನಾಥ ರೈ:– ಇನ್ನೊಂದು ಇಲಾಖೆ ನಮ್ಮ ಪರಿಸರ ಇಲಾಖೆ. ಅರಣ್ಯ ಇಲಾಖೆ ಎನ್ನುವಂಥದ್ದು ಒಂದು ನಿಯಂತ್ರಣ ಇಲಾಖೆ. Regulative Department. Regulate ಮಾಡುವಂಥದ್ದು ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಆರು ಗಂಟೆಗೆ ನಮಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ನಾವು ಮೂರು ದಿವಸದಿಂದ ಕಾದು ಕುಳಿತಿದ್ದೇವೆ.

ಅಧ್ಯಕ್ಷರು:– ಇಲ್ಲ, ಕಾದು ಕುಳಿತಿಲ್ಲ. ನೀವು ಕೇಳಿದ ಪ್ರಕಾರ ಕೊಟ್ಟಿದ್ದೇವೆ.

ಶ್ರೀ ವಿ. ಸುನಿಲ್‌ಕುಮಾರ್:– ನಾವು ಉತ್ತರದ ಬಗ್ಗೆ clarification ಕೇಳಬಹುದೇ? ಮಾನ್ಯ ಸಚಿವರೆ, ತಾವು ಪರಿಸರ ಖಾತೆಯ ಬಗ್ಗೆ ಹೇಳುವುದಕ್ಕೆ ಮೊದಲು ಕಸ್ತೂರಿ ರಂಗನ್ ವರದಿಯ ಮಾರ್ಪಾಡಿನ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಏನೇನು ಮಾಡಿದ್ದೀರಿ ಎಂದು ಸ್ಪಷ್ಟ ಮಾಡಿ. ಎರಡನೆಯದು, ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಹುಲಿ ಸಂರಕ್ಷಣಾ ಯೋಜನೆಗೆ ಸೇರಿಸಬಾರದು ಎಂದು 2013ರಲ್ಲಿ ವಿಧಾನಮಂಡಲದಲ್ಲಿ ತೀರ್ಮಾನವಾಗಿತ್ತು. ಈಗ ಬಂದನಂತರ ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೀರೋ ಅಥವಾ ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಹುಲಿ ಸಂರಕ್ಷಣಾ ಯೋಜನೆಗೆ ಸೇರಿಸುತ್ತೀರೋ ಎನ್ನುವುದನ್ನು clear ಮಾಡಿ. ನಿಮ್ಮ ಉತ್ತರದಲ್ಲಿ ಎರಡರ ಬಗ್ಗೆಯೂ clarify ಮಾಡಲಿಲ್ಲ.

ಶ್ರೀ ಬಿ. ರಮಾನಾಥ ರೈ:– ಕಸ್ತೂರಿ ರಂಗನ್ ವರದಿ ಬಗ್ಗೆ ಮೊನ್ನೆ ತಾವು ಪ್ರಶ್ನೆ ಕೇಳಲಿಲ್ಲ. ಈಗ ತಾವು ಕೇಳಿದ್ದೀರಿ. 20,000 ಚದರ ಕಿ.ಮೀ ವ್ಯಾಪ್ತಿಯಲ್ಲಿ ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ವ್ಯಾಪ್ತಿ ಬರುತ್ತದೆ. ಬಹುಶಃ ನಾವು ನಾಲ್ಕು ಸಲ ಮೀಟಿಂಗ್ ಮಾಡಿ cabinet sub-committee ಯಲ್ಲಿ ಇದರ ಸಾಧಕ–ಬಾಧಕಗಳ ಬಗ್ಗೆ ವಿಮರ್ಶೆ ಮಾಡಿದ್ದೇವೆ. 13,000 ಚ.ಕಿ.ಮೀ ವ್ಯಾಪ್ತಿಗೆ ಮಾತ್ರ ಸೇರತಕ್ಕಂಥದ್ದು ಮಾಡಿ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಕಾರ್ಯವನ್ನು ಮಾಡಿದ್ದೇವೆ. ಸಾಕಷ್ಟು ನಿಯಂತ್ರಣ ವಲಯಕ್ಕೆ ಸೇರಿಸಿ, ಯಾವುದು banned ಇದೆ, red type of industries ಹೊರತು ಪಡಿಸಿ ಬೇರೆ ಯಾವುದಕ್ಕೂ ತೊಂದರೆಯಾಗದ ರೀತಿಯಲ್ಲಿ ನಿಯಂತ್ರಣ

ವಲಯದೊಳಗೆ ಸೇರಿಸುವಂತಹ ಕೆಲಸ ಮಾಡಿದ್ದೇವೆ. ಕೇರಳದಲ್ಲಿ 13,000 ಚ.ಕಿ.ಮೀನಿಂದ 9,000 ಚ.ಕೀಮಿಗೆ ಇಳಿಸಿದ್ದಾರೆ. ನಾವು 20,000 ಚ.ಕಿ.ಮೀ ನಿಂದ 13,000 ಚ.ಕಿ.ಮೀ ಗೆ ಇಳಿಸಿದ್ದೇವೆ. ಸಾಕಷ್ಟು ಸಾಧಕ–ಬಾಧಕಗಳನ್ನು ವಿಮರ್ಶೆ ಮಾಡಿ ನಮ್ಮ cabinet sub-committeeಯಲ್ಲಿಟ್ಟು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವಂತಹ ಕೆಲಸ ಮಾಡುತ್ತೇವೆ. ಮತ್ತೆ ಇನ್ನೂ ಎರಡು ತಿಂಗಳ ಅವಕಾಶ ಕೊಟ್ಟಿದ್ದಾರೆ. ಕೇರಳ ರಾಜ್ಯ ಹೊರತುಪಡಿಸಿ ಬೇರೆ ರಾಜ್ಯಗಳು ಇನ್ನೂ ಕಳುಹಿಸಬೇಕಾಗಿದೆ. ನಾವು ಮೀಟಿಂಗ್ ಮಾಡಿ ಎಲ್ಲಾ ರೀತಿಯ ಪ್ರಕ್ರಿಯೆಗಳನ್ನು ಮಾಡಿ ಮುಗಿಸಿದ್ದೇವೆ. ಇನ್ನು ನಾವು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ನಮ್ಮ ಶಿಫಾರಸ್ಸನ್ನು ಅವರು ಒಪ್ಪಬಹುದು ಎಂದು ನಾವು ನಿರೀಕ್ಷೆಯಲ್ಲಿದ್ದೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಸಚಿವರೆ, ತಾವು ಕೇರಳ ರಾಜ್ಯದ ಮಾದರಿಯಲ್ಲಿ ಮಾಡಬೇಕು. ಆ ವರದಿ ಬಗ್ಗೆ ಅವರು ಏನು ಬದ್ಧತೆಯನ್ನು ತೋರಿಸಿದ್ದಾರೆ ಅದನ್ನು ನಮ್ಮಲ್ಲಿಯೂ ಕೂಡ ಕಾರ್ಯರೂಪಕ್ಕೆ ತರಬೇಕು.

ಶ್ರೀ ಬಿ. ರಮಾನಾಥ ರೈ:– ಅದಕ್ಕೆ ಜನರಿಗೆ ಇದರ ಬಗ್ಗೆ ಒಂದು ಬುಕ್‌ಲೆಟ್ ಮಾಡುತ್ತೇವೆ ಮತ್ತು ಪ್ರತಿ ಜಿಲ್ಲೆಯಲ್ಲಿ ನಮ್ಮ ಸಮಿತಿ ಇದೆ. ಅವರು ಜಿಲ್ಲೆಯಲ್ಲಿ ಪ್ರಮುಖವಾದಂತಹ ತಾಲ್ಲೂಕಿನಲ್ಲಿ ಎರಡು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿ ಏನು ಸಮಸ್ಯೆಗಳಿವೆ ಎನ್ನುವುದನ್ನು ತಿಳಿದುಕೊಂಡು ಖಂಡಿತವಾಗಿಯೂ ಕೇರಳದಲ್ಲಿ ಏನು ಮಾಡಿದ್ದಾರೆ ಅದಕ್ಕಿಂಥಲೂ ಪ್ರಗತಿಪರವಾದಂತಹ ಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ತಮ್ಮ ಮೂಲಕ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ. ಇದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ.

HON'BLE SPEAKER:- Good. Good.

ಶ್ರೀ ವಿ. ಸುನಿಲ್‌ಕುಮಾರ್:- ಹುಲಿ ಸಂರಕ್ಷಣಾ ಯೋಜನೆ ಬಗ್ಗೆ clear ಮಾಡಿ. ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಹುಲಿ ಸಂರಕ್ಷಿತ ಯೋಜನೆಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರದ ಪ್ರಸ್ತಾವನೆ ಯೋಜನೆ ಇದೆ.

ಅಧ್ಯಕ್ಷರು:- ಅಲ್ಲಿ ಹೋಗಿ ಕೇಳಿ.

ಶ್ರೀ ವಿ. ಸುನಿಲ್‌ಕುಮಾರ್:- ಮಾನ್ಯ ಅಧ್ಯಕ್ಷರೆ, 2013 ರಲ್ಲಿ ವಿಧಾನಮಂಡಲದಲ್ಲಿ ಅದರ ಬಗ್ಗೆ ಮಾಡಬಾರದು ಎಂದು ತೀರ್ಮಾನವಾಗಿದೆ. ಈಗ ಏನು ಮಾಡುತ್ತಾರೆ ಎಂದು ಸ್ಪಷ್ಟೀಕರಣ ಕೊಡಲಿ. ಮಾಡುತ್ತೀರೋ ಇಲ್ಲವೋ ಎನ್ನುವುದು ನಮಗೆ ಬೇಕಾಗಿರುವುದು.

ಶ್ರೀ ಬಿ. ರಮಾನಾಥ ರೈ:- ಈಗ ನಾವು ಮಾಡುತ್ತಿಲ್ಲ. ಕೇಂದ್ರ ಸರ್ಕಾರದವರು ಮಾಡುತ್ತಾರೋ ಇಲ್ಲವೋ ನಮಗೆ ಗೊತ್ತಿಲ್ಲ.

ಶ್ರೀ ವಿ. ಸುನಿಲ್‌ಕುಮಾರ್:- ಹಿಂದಿನ ಕೇಂದ್ರ ಸರ್ಕಾರ ಮಾಡಿರುವುದು. ಈಗಿನ ಕೇಂದ್ರ ಸರ್ಕಾರ ಅಲ್ಲ. ಹಿಂದಿನ UPA ಸರ್ಕಾರ ಕಳುಹಿಸಿಕೊಟ್ಟಿರುವುದು. ಹಾಗಾದರೆ ನೀವು ಅದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಬಿ. ರಮಾನಾಥ ರೈ:- ನಾವು ಹುಲಿ ಯೋಜನೆ ಮಾಡುತ್ತಿಲ್ಲ.

ಶ್ರೀ ವಿ. ಸುನಿಲ್‌ಕುಮಾರ್:- ಮಾನ್ಯ ಸಚಿವರೆ, ದಯಮಾಡಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ. ಈ ಹಿಂದಿನ ಕೇಂದ್ರ ಸರ್ಕಾರ ಹುಲಿ ಯೋಜನೆಗೆ ಪ್ರಸ್ತಾವನೆ ಕೊಟ್ಟಿತ್ತು.

ಅಧ್ಯಕ್ಷರು:- ಈಗ ಹೋಗಿ ಬೇಡವೆಂದು ಹೇಳಿ.

ಶ್ರೀ ವಿ. ಸುನಿಲ್‌ಕುಮಾರ್:- ಮಾನ್ಯ ಅಧ್ಯಕ್ಷರೆ, 2013 ರಲ್ಲಿ ನಾವು ಅದನ್ನು ಒಪ್ಪಿಕೊಳ್ಳುವುದಿಲ್ಲವೆಂದು ವಿಧಾನಮಂಡಲದಲ್ಲಿ ತೀರ್ಮಾನವಾಗಿದೆ. ಈಗ ಅದನ್ನು ಏನು ಮಾಡುತ್ತೀರಿ?

ಶ್ರೀ ಬಿ. ರಮಾನಾಥ ರೈ:- ಈಗ ನಾವು ಮಾಡುತ್ತಿಲ್ಲವಲ್ಲಾ? ಈಗ ನಿಮಗೆ ಏನು ಬೇಕಾಗಿದೆ?

ಅಧ್ಯಕ್ಷರು:- ಅವರೂ ಒಪ್ಪಬೇಕು, ಎಲ್ಲರೂ ಒಪ್ಪಬೇಕು ವಿಚಾರ ಮಾಡಿ ತೀರ್ಮಾನ ಮಾಡಿ.

ಶ್ರೀ ವಿ. ಸುನಿಲ್‌ಕುಮಾರ್:- ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಿ.

ಶ್ರೀ ಬಿ. ರಮಾನಾಥ ರೈ:- ನಾವು ಹುಲಿ ಯೋಜನೆ ಮಾಡುತ್ತಿಲ್ಲ. ಬೇರೆ ವಿಚಾರ ಬೇಕಾಗಿಲ್ಲ. ನಮ್ಮಿಂದ ಹುಲಿ ಯೋಜನೆ ಮಾಡುವಂತಹ ಪ್ರಸ್ತಾಪ ಇಲ್ಲ. ಘನ ತ್ಯಾಜ್ಯ ನಿರ್ವಹಣೆ ಜವಾಬ್ದಾರಿ ಬಗ್ಗೆ, ಹಲವಾರು ಮಾನ್ಯ ಸದಸ್ಯರುಗಳು ನಮಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಮ್ಮ ಪರಿಸರ ಇಲಾಖೆ ಇರಬಹುದು, ಮಾಲಿನ್ಯ ನಿಯಂತ್ರಣ ಮಂಡಳಿ ಇರಬಹುದು, ಅದೊಂದು regulative department. ಸ್ಥಳೀಯ ಸಂಸ್ಥೆಗಳು ಮಾಡಲು ಏನಾದರೂ ತಪ್ಪು ಆದರೆ ಅದಕ್ಕೆ ಸೂಚನೆ ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಯಾವುದಾದರು ಕಾರ್ಖಾನೆಯವರು ತಪ್ಪು ಮಾಡಿದ್ದರೆ, ಅವರ ಕ್ರಮದಲ್ಲಿ ತಪ್ಪು ಆದರೆ ಅವರಿಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ಪರಿಸರ ರಕ್ಷಣೆ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಬೇರೆ ಬೇರೆ ಇಲಾಖೆಗಳಿಗೆ ಮಾಡಿದ್ದೇವೆ. ಶಾಲೆಗಳಲ್ಲಿ eco club ಮಾಡಲು ಸ್ವಲ್ಪ ಹಣವನ್ನು ಶಿಕ್ಷಣ ಇಲಾಖೆಯಿಂದ ಕೊಡಿಸುವಂತಹ ಕೆಲಸ ಮಾಡುತ್ತಿದ್ದೇವೆ. ಮಂಗಳೂರಿನಲ್ಲಿ ಒಂದು eco park ನಿರ್ಮಾಣಕ್ಕಾಗಿ ಐದು ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ. ಪಿಲಿಕುಳ ನಿಸರ್ಗಧಾಮದಲ್ಲಿ ಪರಿಸರದ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಲು, ಯಾವ ಸಸ್ಯ ಜೀವರಾಶಿಗಳು ನಾಶವಾಗುತ್ತಿದೆ ಅಂತಹ ಸಸ್ಯ ಜೀವರಾಶಿಗಳನ್ನು ಒಂದು ಕಡೆ ಬೆಳೆಸುವುದಕ್ಕೆ eco urban, eco park ಅನ್ನು ಮಾಡುತ್ತಿದ್ದೇವೆ. ಆ ಭಾಗದಲ್ಲಿ auditorium ಮಾಡಿ ಮುಂದಿನ ಪೀಳಿಗೆಯು ಮಕ್ಕಳಿಗೆ ತೋರಿಸಲು ಸೂಕ್ತವಾದ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಈಗ NOC ಕೊಡುವಂತಹ ಸಂದರ್ಭದಲ್ಲಿ ಸುತ್ತಮುತ್ತ ಪರಿಸರವನ್ನು ಸಮಗ್ರವಾಗಿ ಪರಿಶೀಲಿಸಿ ಷರತ್ತುಗಳ ಅಡಿಯಲ್ಲಿ ಕೊಡುವುದಕ್ಕೆ ನಾವು ಪ್ರಯತ್ನ

ಮಾಡುತ್ತೇವೆ. ಎಲ್ಲಾ ಕೈಗಾರಿಕೆಗಳು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ನಿಗದಿಪಡಿಸಿ ಎತ್ತರದ ಚಿಮಣಿ ಅಳವಡಿಸಿಕೊಳ್ಳಬೇಕೆಂದು ಹೇಳಿ ನಾವು ಈಗಾಗಲೇ ಮಾಲಿನ್ಯಕಾರಕ ಮಾಪನ ಮಾಡಲಾಗುತ್ತಿದೆ. ಬೆಂಗಳೂರು ನಗರ ಹಾಗೂ ರಾಜ್ಯದ ಪ್ರಮುಖ ನಗರಗಳಾದ ಮೈಸೂರು, ಮಂಗಳೂರು, ಕಾರವಾರ ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗಾ, ರಾಯಚೂರು, ಚಿತ್ರದುರ್ಗ, ಹಾಸನ, ಮಂಡ್ಯ, ಕೋಲಾರ, ದಾವಣಗೆರೆ, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ವಾಯುವಿನ ಗುಣಮಟ್ಟ ಮಾಪನ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ವಾಯುಗುಣದ ಮಾಪನದಂತೆ, ಉಸಿರಾಡುವ ಸೂಕ್ಷ್ಮ ಕಣಗಳ ಪ್ರಮಾಣ ನಿಗದಿ ಪ್ರಮಾಣಕ್ಕಿಂಥ ಹೆಚ್ಚಾಗಿರುವುದು ಕಂಡುಬಂದಿದೆ. ಇದಕ್ಕೆ ಕಾರಣಗಳು, ಪ್ರಮುಖವಾಗಿ ವಾಹನಗಳ ದಟ್ಟಣೆ, ಕಟ್ಟಡ ನಿರ್ಮಾಣ, ಜನರೇಟರ್ ಕಾರ್ಯಾಚರಣೆ ಹಾಗೂ ರಸ್ತೆಗಳಲ್ಲಿ ಉಂಟಾಗಿರುವಂತಹ ಮಾಲಿನ್ಯ ಎಂದು ಹೇಳಲಾಗಿದೆ. ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಸರ್ಕಾರದ ಮಟ್ಟದಲ್ಲಿ ಈಗಾಗಲೇ ಅಪರ ಮುಖ್ಯಕಾರ್ಯದರ್ಶಿಯವರು ನೇತೃತ್ವದಲ್ಲಿ ಒಂದು Task Force Committee ಅನ್ನು ರಚನೆ ಮಾಡಿ ಇಂತಹ ಪರಿಸರಕ್ಕೆ ತೊಂದರೆಯಾಗುವಂತಹ ಕೆಲಸಗಳು ಎಲ್ಲಿ ಆಗುತ್ತವೆ ಅದನ್ನು ತನಿಖೆ ಮಾಡಿಸಲು ಒಂದು ಸಮಿತಿಯನ್ನು ಈಗಾಗಲೇ ರಚನೆ ಮಾಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಇಂಧನದಲ್ಲಿ ಸಲ್ಫರ್ ಅಂಶ ಕಡಿಮೆ ಮಾಡುವುದರಲ್ಲಿ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೆರೆ ಮಾಲಿನ್ಯದ ಬಗ್ಗೆ ತಾವು ಹೇಳಿರುತ್ತೀರಿ. Lake Development Authority ಅದಕ್ಕೆ ಒಂದು ಹೊಸ amendment ಅನ್ನು ನಾವು ತರುತ್ತಿದ್ದೇವೆ. ಈಗ society act ನಲ್ಲಿ Lake Development Authority ಎಂದು ಇದೆ, ಅದನ್ನು ನಾವು ಶಕ್ತಿಯುತವಾಗಿ ಮಾಡುವುದಕ್ಕೆ ತಿದ್ದುಪಡಿಯನ್ನು ಮುಂದಿನ ಸದನದಲ್ಲಿ ತರಲಿಕ್ಕೆ ಈಗಾಗಲೇ ಕಾನೂನು ಇಲಾಖೆ ಒಪ್ಪಗೆಯನ್ನು ಪಡೆದುಕೊಂಡಿದ್ದೇವೆ ಇನ್ನು Finance Department ಗೆ ಕಳುಹಿಸುತ್ತೇವೆ. ಅವರ ಒಪ್ಪಿಗೆಯನ್ನು ತೆಗೆದುಕೊಂಡು ಈ ಸದನದಲ್ಲಿ ಮಂಡಿಸಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ

ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಾಸುರವರು ಹೇಳಿದರು. ಕುಕ್ಕೆಯಲ್ಲಿರುವ ಕೆರೆಯ ಮಾಲಿನ್ಯ ಸಮಸ್ಯೆಯನ್ನು ಬಗೆಹರಿಸಿ ಈಗಾಗಲೇ ಕಾಮಗಾರಿ ಚಾಲ್ತಿಯಲ್ಲಿದೆ. ಈ ಕೆರೆಗೆ ಕೊಳಚೆ ನೀರು ಸೇರದಂತೆ ಒಳಚರಂಡಿ ವ್ಯವಸ್ಥೆ ದುರಸ್ತಿ ಆಗಬೇಕು. Diversion ಕೆಲಸ ಚಾಲ್ತಿಯಲ್ಲಿದ್ದು ಇನ್ನು ಎರಡು-ಮೂರು ತಿಂಗಳಲ್ಲಿ ಪೂರ್ಣ ಮಾಡತಕ್ಕಂಥದು ಮೈಸೂರು ನಗರಸಭೆ ಇಂತಹ ಮಾಲಿನ್ಯ ಆಗತಕ್ಕಂಥ ಕೆರೆಗಳಿಗೆ ಆಗತಕ್ಕಂಥದ್ದಕ್ಕೆ ಸರಿಪಡಿಸಲಿಕ್ಕೆ ಸೂಕ್ತವಾದ ನಿರ್ದೇಶನವನ್ನು ಪರಿಸರ ಇಲಾಖೆ ನಮ್ಮ ಪ್ರತಿಯೊಂದು ಇಲಾಖೆಗೆ ಒಂದು ನಿಯಂತ್ರಣ ಇಲಾಖೆಯಾಗಿ ಇದ್ದುಕೊಂಡು ಬಹುಶಃ ಅರಣ್ಯ ಸಂರಕ್ಷಣೆಯ ದೃಷ್ಟಿಯಲ್ಲಿ ಕೆಲಸ ಮಾಡುತ್ತಿದೆ. ವನ್ಯಜೀವಿ ಸಂರಕ್ಷಣೆಯ ದೃಷ್ಟಿಯಲ್ಲಿ ಕೆಲಸ ಮಾಡುತ್ತಿದೆ. ಅದೇ ರೀತಿ ಪರಿಸರದ ರಕ್ಷಣೆಯ ಕೆಲಸವನ್ನು ಕೂಡ ನಮ್ಮ ಕರ್ತವ್ಯದ ಅಡಿಯಲ್ಲಿ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ನಮ್ಮ ಇಲಾಖೆಯ ಬಗ್ಗೆ ಹಲವಾರು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ತಾವು ಕೊಟ್ಟಿದ್ದೀರಿ ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಸಮರ್ಪಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಜೈಹಿಂದ, ಜೈ ಕರ್ನಾಟಕ.

ಅಧ್ಯಕ್ಷರು:- 2014-15ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ದಿನಾಂಕ: 31-3-2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ" ಅಭಿಯಾಚನೆ ಕ್ರಮಾಂಕ: 08 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 122715.73 ಲಕ್ಷ ರೂ.ಗಳು ಹಾಗೂ ಬಂಡವಾಳ ಖಾತೆಯಲ್ಲಿ 1250.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕೃತವಾಗಿದೆ

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಸಂಖ್ಯೆ:08:ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ: 31–3–2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ" ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ" ಅಭಿಯಾಚನೆ ಕ್ರಮಾಂಕ: 08 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 122715.73 ಲಕ್ಷ ರೂ.ಗಳು ಹಾಗೂ ಬಂಡವಾಳ ಖಾತೆಯಲ್ಲಿ 1250.00 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಅಧ್ಯಕ್ಷರು:– ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳೋಣ ಅಥವಾ ಮುಂದಕ್ಕೆ ಹಾಕೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾಳೆ ತೆಗೆದುಕೊಳ್ಳಿ ಸರ್.

ಅಧ್ಯಕ್ಷರು:– ಆಯಿತು. ಈಗ ಸದನವನ್ನು ಮುಂದೂಡಿ ನಾಳೆ ಬೆಳಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 7 ಗಂಟೆ 52 ನಿಮಿಷಕ್ಕೆ ಮುಂದೂಡಿ ಪುನಃ ಮಂಗಳವಾರ ದಿನಾಂಕ: 22–7–2014 ರಂದು ಬೆಳಗ್ಗೆ: 10.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)